ಅರ್ಜಿದಾರರು: ಗೋವಿಂದ ಬೇಡು ನಾಯ್ಕ
ಸಾ: ಹನುಮಟ್ಟಾ, ವಂದಿಗೆ
ತಾಲೂಕು: ಅಂಕೋಲಾ,
ಜಿಲ್ಲೆ: ಉತ್ತರಕನ್ನಡ.
(ಅರ್ಜಿದಾರರ ಪರವಾಗಿ ಶ್ರೀ. ಚರಣ ಡಿ. ನಾಯ್ಕ, ವಕೀಲರು)

ಪ್ರಸ್ತಾವನೆ:

1. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಈ ಪ್ರಾಧಿಕಾರಕ್ಕೆ ದಿನಾಂಕ: 21-02-2004 ರಂದು ವರದಿ ಸಲ್ಲಿಸುತ್ತಾ ದಿನಾಂಕ: 19-02-2014 ರಂದು ರಾತ್ರಿ 10 ಘಂಟೆ ಸುಮಾರಿಗೆ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರಿಗೆ ಕೆಎ-30/251 ನಾಗೇಶ ಮಹಾಲಕ್ಷ್ಮಿ ವಾಹನದ ಮೇಲೆ ಸುಂಕಸಾಳ ಶಾಖಾ ಹದ್ದಿಯಲ್ಲಿ ಅನಧಿಕೃತವಾಗಿ ಸಾಗ ತುಂಡುಗಳನ್ನು ಸಾಗಿಸುವ ಕುರಿತು ಬಾತ್ಮಿ ಬಂದ ಮೇರೆಗೆ ರಾತ್ರಿ ಗಸ್ತಿನಲ್ಲಿದ್ದ ಸಿಬ್ಬಂದಿಗಳಾದ ಶಾಖಾ ವನಪಾಲಕ ಮಾಸ್ತಿಕಟ್ಟಾ, ಅರಣ್ಯ ರಕ್ಷಕ ಅಗಸೂರು, ಶಾಖಾ ವನಪಾಲಕ ಸುಂಕಸಾಳ, ಅರಣ್ಯರಕ್ಷಕ ಸುಂಕಸಾಳ ಇವರನ್ನು ತಿಳಿಸಿದ ಮೇರೆಗೆ ಸದರಿಯವರು ಖಾಸಗಿ ವಾಹನ ಸಂಖ್ಯೆ: ಕೆಎ-14/ಎಂ.9001ನೇದರಲ್ಲಿ ಗಸ್ತು ತಿರುಗುತ್ತಾ ಹೈಲ್ಯಾಂಡ್, ಸುಂಕಸಾಳ, ಹೊಸಕಂಬಿ ಪ್ರದೇಶದಲ್ಲಿ ಪೆಟ್ರೋಲಿಂಗ್ ಮಾಡುತ್ತಾ ಪುನ: ತಿರುಗಿ ಬಂದು ಸುಂಕಸಾಳ ಶಾಖಾ ಹದ್ದಿಯ ಬ್ಲಾಕ್ 24-25ರ ಕೋಟೆಪಾಲ ರೋಡಿನಲ್ಲಿ ರಣಕಂಬದ ಹತ್ತಿರ ಗಸ್ತುನಲ್ಲಿರುವ 2-3 ಸಿಬ್ಬಂದಿಗಳನ್ನು ಸದರ ಗುನ್ಹೆ ಸ್ಥಳದಲ್ಲಿ ಕಾವಲು ಬಿಟ್ಟಂತೆ ಅವರು ಗಸ್ತು ಕಾಯುತ್ತಿರುವಾಗ ಸುಮಾರು ಬೆಳಗ್ಗಿನ ಜಾವ 5.30 ಘಂಟೆಗೆ ಎನ್.ಹೆಚ್-63ರ ಮಂಗಳೂರು ಹೋಟೆಲ್ ಬದಿಯಲ್ಲಿ ಪೂರ್ಣ ತಾಳಪತ್ರೆ ಕಟ್ಟಿದ ಕೆಎ-30/251 ವಾಹನ ಕಂಡು ಬಂದಿತು. ಸದರ ಟ್ರಕ್ ತಪಾಸಿಸಲಾಗಿ ಸದರ ವಾಹನದಲ್ಲಿ 50 ಭತ್ತದ ಉಮ್ಮಿ ತುಂಬಿದ ಸಿಮೆಂಟ್ ಚೀಲಗಳು ಇದ್ದದ್ದು ಕಂಡು ಬಂದಿತು ಈ ಕುರಿತು ವಾಹನದ ಮಾಲೀಕ/ಚಾಲಕ ಶ್ರೀ. ಗೋವಿಂದ ಬೇಡು ನಾಯ್ಕ ಹಾಗೂ ಕ್ಲೀನರ್ ಮಂಜುನಾಥ ಗಣಪತಿ ನಾಯ್ಕ ಇವರನ್ನು ಕೇಳಲಾಗಿ ಅದನ್ನು ಇಡಗುಂದಿ ಮಿಲ್ಲಿನಿಂದ ತಂದಿರುವದಾಗಿ ಅದಕ್ಕೂ ಮೊದಲು ಅಂಕೋಲಾದಿಂದ ಕೆಂಪು ಚೀರೆಕಲ್ಲನ್ನು ಅಂಕೋಲಾದಿಂದ ಇಡಗುಂದಿಗೆ ಸಾಗಿಸಿರುವದಾಗಿ ತಿಳಿಸಿದರು. ಆದರೆ ಸದರ ವಾಹನವನ್ನು ಪರಿಶೀಲಿಸಿದಾಗ ಅದರಲ್ಲಿ ಕೆಂಪು ಕಲ್ಲು ತುಂಬಿರುವ ಕುರುಹು ಯಾವುದೇ ಇಲ್ಲವೆಂದು ಸಿಬ್ಬಂದಿಗಳು ತಿಳಿಸಿರುತ್ತಾರೆ. ನಂತರ ವಾಹನವನ್ನು ಹೆಚ್ಚಿನ ತನಿಖೆಗಾಗಿ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ವಲಯಕ್ಕೆ ತರಲಾಯಿತು. ಈ ಕುರಿತು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಸುದೀರ್ಘವಾಗಿ ವಾಹನ ಚಾಲಕನನ್ನು

ವಿಚಾರಿಸಲಾಗಿ ಆಗ ವಾಹನ ಚಾಲಕ/ಮಾಲೀಕನಾದ ಗೋವಿಂದ ಬೇಡು ನಾಯ್ಕ ಇತನು ತಾನು ಸದರ ವಾಹನದಲ್ಲಿ ಸಾಗವಾನಿ ತುಂಡುಗಳನ್ನು ತುಂಬಲು ಬಂದಿದ್ದು ನಿಜವಿರುವದಾಗಿ ಹಾಗೂ ತಾನು ಇದನ್ನು ಸಂಜು ಪಾಂಡುರಂಗ ನಾಯ್ಕ, ಸಾ: ಅಂಕೋಲಾ ಇವರ ಸಲಹೆ ಮೇರೆಗೆ ಹೆಬ್ಬುಳ ಹಾಗೂ ಸುಂಕಸಾಳ ಅರಣ್ಯ ಪ್ರದೇಶದಲ್ಲಿ ತಯಾರಿಸಲ್ಪಟ್ಟ ತುಂಡುಗಳನ್ನು ತರಲು ಹೊರಟಿರುವದಾಗಿ ತಿಳಿಸಿದರು. ಹಾಗೂ ಈ ರೀತಿ ತಾನು ಸಾಗ ತುಂಡುಗಳನ್ನು ತುಂಬಲು ಹೋಗಬೇಕಾದರೆ ತಾನು ಊಟ ಮಾಡಲು ನಿಂತ ದಾಬಾದ ಬಳಿ ಸಂಜು ಪಾಂಡುರಂಗ ನಾಯ್ಕ ಇತನು ಬಂದು ಅರಣ್ಯ ಸಿಬ್ಬಂದಿಗಳಿಗೆ ಸಂಶಯ ಬಂದ ಕಾರಣ ಸಾಗ ತುಂಡುಗಳನ್ನು ತುಂಬುವದು ಬೇಡ ಎಂದು ಕಾರಣ ತಾನು ಅಲ್ಲಿಯೇ ವಾಹನವನ್ನು ನಿಲ್ಲಿಸಿಟ್ಟ ಬಗ್ಗೆ ಹಾಗೂ ಭತ್ತದ ಉಮ್ಮಿಯ ಚೀಲಗಳನ್ನು ತೆಗೆದುಕೊಂಡು ಹೋಗಿ ಸಾಗ ತುಂಡುಗಳನ್ನು ತುಂಬಿ ಬರಲು ಯೋಜನೆ ಮಾಡಿದ ಬಗ್ಗೆ ತಿಳಿಸಿ, ಸದರ ಸಾಗವಾನಿ ತುಂಡುಗಳು ಇದ್ದ ಸ್ಥಳವನ್ನು ಸಹ ತೋರಿಸುವದಾಗಿ ತಿಳಿಸಿದ ಮೇರೆಗೆ ಅವನ ಜೊತೆ ಸಿಬ್ಬಂದಿಗಳು ಸದರ ಸಾಗವಾನಿ ತುಂಡುಗಳನ್ನು ದಾಸ್ತಾನು ಇಟ್ಟ ಸ್ಥಳವಾದ ಸುಂಕಸಾಳ ಬ್ಲಾಕ್–24–25ರಲ್ಲಿ ಹೋಗಿ ಪರಿಶೀಲಿಸಿ ನೋಡಲಾಗಿ ಅಲ್ಲಲ್ಲಿ ರಸ್ತೆ ಬದಿಗೆ ಚಿಪಡದಲ್ಲಿ ತುಂಡುಗಳು ದಾಸ್ತಾನು ಇಟ್ಟಿದ್ದು ಕಂಡು ಬಂದಿತು. ಸದರ ತುಂಡುಗಳು ತಾಜಾ ಹಸಿ ತುಂಡುಗಳು ಇದ್ದು ಯಾವುದೇ ನಂಬರ ವಗೈರೆ ಇರಲಿಲ್ಲ ಇವುಗಳು ಅನಧಿಕೃತ ತುಂಡುಗಳು ಎಂದು ಖಾತ್ರಿ ಮಾಡಿಕೊಂಡು ಸದರ ವೇಳೆಯಲ್ಲಿ ಪಂಚರು ಸಿಗದಿದ್ದ ಕಾರಣ ಇಲಾಖಾ ಸಿಬ್ಬಂದಿಗಳನ್ನೇ ಪಂಚರನ್ನಾಗಿಸಿಕೊಂಡು ಪಂಚನಾಮೆಯನ್ನು ಬೆಳಿಗ್ಗೆ 10 ಗಂಟೆಯಿಂದ ಪ್ರಾರಂಭಿಸಿ ವಿಚಾರಣೆಯೊಂದಿಗೆ ಸಂಜೆ 6.30 ಕ್ಕೆ ಬರೆದು ಮುಗಿಸಲಾಯಿತು. ಪಂಚರ ಸಮಕ್ಷಮ ತುಂಡುಗಳನ್ನು ಎಣಿಸಲಾಗಿ ಅವು 45 ತುಂಡುಗಳು 3.222 ಘ.ಮೀ. ಇದ್ದದ್ದು ಕಂಡು ಬಂದು ಅದಕ್ಕೆ ಟೀ ನಿಶಾನೆ ಚಪ್ಪಾ ಹೊಡೆದು ಅದನ್ನು ಇಲಾಖಾ ತಾಬಾ ಪಡಕೊಳ್ಳಲಾಯಿತು. ನಂತರ ಸದರ ವಾಹನವನ್ನು ಪರಿಶೀಲಿಸಿ ನೋಡಲಾಗಿ ಅದರ ಮುಖ ಭಾಗ ಹಳದಿ ಬಣ್ಣದಿದ್ದು ಮುಂದುಗಡೆ ಬೋರ್ಡಿನಲ್ಲಿ ನಾಗೇಶ ಮಹಾಲಕ್ಷ್ಮಿ ಅಂತಾ ದಪ್ಪಕ್ಷರದಲ್ಲಿ ಬರದದ್ದು ಇದ್ದು, ಕ್ಯಾಬಿನ್ ಗಾಡಿಯ ಬಾಡಿ ಆಕಾಶ ಕಲರ್ ಇದ್ದು ವಾಹನದ ಎಡಭಾಗದ ಮೇಲೆ ವಾಹನದ ಮಾಲೀಕ/ಚಾಲಕನ ಟೆಲಿಫೋನ್ ನಂಬರ 631460 ನಮೂದಿಸಿದ್ದು ಇರುತ್ತದೆ. ಮತ್ತು ವಾಹನದ ಮೇಲೆ ಕಪ್ಪು ಬಣ್ಣದಲ್ಲಿ ಕೆಎ–30/251 ಅಂತಾ ನಂಬರ ಬರೆದದ್ದು ಇರುತ್ತದೆ. ಹಾಗೂ ಸದರ ಗುನ್ನೆಗೆ ಬಳಸಿದ ವಾಹನವನ್ನು ಈ ಹಿಂದೆ ನಾವು ನಾಲ್ಕು ಬಾರಿ ಗುನ್ನೆಗೆ ಬಳಸಿದ್ದಾಗಿ ತಿಳಿಸಿದ್ದು ಇರುತ್ತದೆ. ಇದರಿಂದ ಸದರ ವಾಹನವನ್ನು ಅಕ್ರಮ ಸಾಗಾಣಿಕೆಗೆ ಬಳಸಿಕೊಂಡಿದ್ದನ್ನು ಖಾತ್ರಿಪಡಿಸಿ 71ಎ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಲು ವಾಹನವನ್ನು ಜಫ್ತಪಡಿಸಲಾಯಿತು. ಹಾಗೂ ಅಕ್ರಮ ಸಾಗಾಣಿಕೆಯ ವ್ಯವಹಾರದಲ್ಲಿ ಭಾಗಿಯಾಗಿದ್ದ ವಾಹನದ ಮಾಲೀಕ/ಚಾಲಕರಾದ ಶ್ರೀ ಗೋವಿಂದ ಬೇಡು ನಾಯ್ಕ ಮತ್ತು ಕ್ಲೀನರ್ ಮಂಜುನಾಥ ಗಣಪತಿ ನಾಯ್ಕ ಇವರನ್ನು ಅರಣ್ಯ ಕಾಯಿದೆಯಂತೆ ಕ್ರಮ ಕೈಕೊಳ್ಳಲು ನ್ಯಾಯಾಲಯಕ್ಕೆ ಒಪ್ಪಿಸಲು ನಿರ್ಧರಿಸಿ ಬಂಧಿಸಲಾಯಿತು. ಆದ್ದರಿಂದ ಈ ಅರಣ್ಯ ಗುನ್ನೆ ಪ್ರಕರಣದಲ್ಲಿ ತೊಡಗಿಸಿಕೊಂಡ ವಾಹನ ಹಾಗೂ ಸಾಗ ನಗಗಳು 45=3.222 ಘ.ಮೀ. ಪ್ರಥಮ ಮಾಹಿತಿ ವರದಿ ಸಂಖ್ಯೆ: 7/2003–04 ದಿನಾಂಕ: 20–02–2004 ರಂತೆ ಗುನ್ನೆ ದಾಖಲಿಸಿಕೊಳ್ಳಲಾಯಿತು. ಗುನ್ನೆಗೆ ಬಳಸಿದ ವಾಹನ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 24, 62, 71A, 80, 104D ಮತ್ತು ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ144 ರ ನೇರ ಉಲ್ಲಂಘನೆಯಾಗಿದ್ದು, ನಿಯಮ 165 ಹಾಗೂ ಭಾರತೀಯ ದಂಡ ಸಂಹಿತಿ 34ರ ಅಡಿ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಜಪ್ತ ವಾಹನ ಮತ್ತು ಮ್ಹಾಲನ್ನು ಪಂಚನಾಮೆ, ಸೀಜರ್ ರಿಪೋರ್ಟ ಮತ್ತು ಪ್ರಥಮ ಮಾಹಿತಿ ವರದಿ ಜೊತೆಗೆ ಮುಂದಿನ ಕ್ರಮಕ್ಕಾಗಿ ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುತ್ತಾರೆ. ಹಾಗೂ ಸದರ ಪ್ರಕರಣದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಖಾತ್ರಿಪಡಿಸಿ ಈ ಪ್ರಾಧಿಕಾರದ ಆದೇಶ ದಿನಾಂಕ: 11–03–2004 ರಂದು ಸದರ ಜಪ್ತಪಡಿಸಿದ ವಾಹನ ಮತ್ತು ಸಾಗ ನಗಗಳನ್ನು ಸುರಕ್ಷತೆಗಾಗಿ ವಲಯ ಅರಣ್ಯಾಧಿಕಾರಿ, ಕಾರವಾರ ಇವರ ತಾಬಾದಲ್ಲಿ ವಹಿಸಿಕೊಡಲಾಯಿತು.

2. ಸದರ ಜಪ್ತ ವಾಹನದಲ್ಲಿ ಇರುವ ಆರ್.ಸಿ. ಪುಸ್ತಕ ಆಧಾರದ ಮೇಲೆ ಶ್ರೀ. ಗೋವಿಂದ ಬೇಡು ನಾಯ್ಕ, ಸಾ: ವಂದಿಗೆ, ತಾಲೂಕ: ಅಂಕೋಲಾ ಇವರು ಟಾಟಾ ಟ್ರಕ ವಾಹನ ಸಂಖ್ಯೆ: ಕೆಎ–30/251 ನೇದರ ಮಾಲೀಕರಾಗಿರುತ್ತಾರೆ. ಸದರ ವಾಹನದ ಮಾಲೀಕರಾದ ಶ್ರೀ. ಗೋವಿಂದ ಬೇಡು ನಾಯ್ಕ, ಸಾ: ವಂದಿಗೆ ಇವರು ದಿನಾಂಕ: 08–03–2004 ರಂದು ಅವರ ಪರವಾಗಿ ವಕೀಲರ ಮುಖಾಂತರ ವಾಹನವನ್ನು ಬಿಡುಗಡೆ ಮಾಡಲು ಕೋರಿಕೊಂಡಿದ್ದು ಇರುತ್ತದೆ. ಆದರೆ, ಇವರಿಗೆ ಈ ಪ್ರಾಧಿಕಾರದಿಂದ ದಿನಾಂಕ: 28–04–2006 ರಂದು ಅರ್ಜಿದಾರರಿಗೆ ಅರಣ್ಯಗುನ್ನೆಯಲ್ಲಿ ಜಪ್ತಪಡಿಸಿದ ಟಾಟಾ ಟ್ರಕ್ ಸಂಖ್ಯೆ: ಕೆಎ–30/251 ನೇದನ್ನು ಮಧ್ಯಂತರ ತಾಬಾಕ್ಕೆ ಬಿಡಲು ಅರ್ಜಿದಾರರ ಮನವಿಯನ್ನು ತಿರಸ್ಕರಿಸಿದ್ದು ಇರುತ್ತದೆ.

3. ಅರ್ಜಿದಾರರು ಈ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಜಿಲ್ಲಾ ಸೆಷನ್ ಕೋರ್ಟ, ಕಾರವಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸಿ ವಾಹನವನ್ನು ಬಿಡುಗಡೆಗೊಳಿಸಲು ಕೋರಿಕೊಂಡಿದ್ದು ಮಾನ್ಯ ಜಿಲ್ಲಾ ಸೆಷನ್ ನ್ಯಾಯಾಲಯ, ಕಾರವಾರ ಸಿ.ಎ. ನಂ. 82/2006, ದಿನಾಂಕ: 30–08–2006 ರಂತೆ ರೂ. 50000.00 ಬ್ಯಾಂಕ್ ಗ್ಯಾರಂಟಿಯನ್ನು ಈ ಪ್ರಾಧಿಕಾರಕ್ಕೆ ನೀಡಿ ಮತ್ತು ಇತರೇ ಶರ್ತುಗಳಿಗೊಳಪಟ್ಟು ಜಪ್ತ ವಾಹನವನ್ನು ಮಧ್ಯಂತರ ತಾಬಾ ಬಿಡಲು ಆದೇಶ ನೀಡಿದ್ದು ಇರುತ್ತದೆ.

4. ಗುನ್ನೆಗಾರ/ವಾಹನದ ಮಾಲೀಕರಾದ ಶ್ರೀ. ಗೋವಿಂದ ಬೇಡು ನಾಯ್ಕ, ಸಾ: ವಂದಿಗೆ, ಹನುಮಟ್ಟಾ ಇವರು ಮಾನ್ಯ ಜಿಲ್ಲಾ ಸೆಷನ್ ನ್ಯಾಯಾಲಯ, ಕಾರವಾರ ಆದೇಶಾನುಸಾರ ಬ್ಯಾಂಕ್ ಗ್ಯಾರಂಟಿಯನ್ನು ನೀಡಿ ವಾಹನವನ್ನು ತಾತ್ಕಾಲಿಕವಾಗಿ ಬಿಡುಗಡೆಗೊಳಿಸಿಕೊಂಡಿದ್ದು ಇರುವದಿಲ್ಲ.

5. ಈ ಪ್ರಕರಣದ ವಿಚಾರಣೆಯನ್ನು ದಿನಾಂಕ: 6–12–2004, 13–12–2004, 20–12–2004, 27–12–2004, 17–1–2005, 7–2–2005, 9–10–2007, 30–10–2007, 27–11–2012, 30–8–2013, 5–9–2013, 8–11–2013, 6–12–2013, 20–12–2013, 3–1–2014, 17–1–2014, 14–2–2014, 28–2–2014, 23–5–2014, 4–7–2014, 1–8–2014, 5–9–2014, 31–10–2014, 21–11–2014, 5–12–2014 ಮತ್ತು 3–1–2015 ರಂದು ಈ ನ್ಯಾಯಾಲಯದಲ್ಲಿ ಇಟ್ಟುಕೊಳ್ಳಲಾಯಿತು.

6. ಜಫ್ತುಪಡಿಸಿದ ವಾಹನದ ಬಗ್ಗೆ ಮುಂದಿನ ಆದೇಶಕ್ಕಾಗಿ ಪ್ರಕರಣವನ್ನು ವಿಚಾರಣೆಗಾಗಿ ಕೈಗೆತ್ತಿಕೊಳ್ಳಲಾಯಿತು. ಅರ್ಜಿದಾರರ ಪರ ವಕೀಲರು ವಿಚಾರಣೆ ಕಾಲಕ್ಕೆ ಹಾಜರಾಗಿರುತ್ತಾರೆ. ಹಾಗೂ ಎದುರುದಾರರ ಪರವಾಗಿ ಕಾನೂನು ಅಧಿಕಾರಿಗಳು (ಕಿ), ಉತ್ತರಕನ್ನಡ ಕಾರವಾರ ರವರು ವಿಚಾರಣೆಗೆ ಹಾಜರು ಆಗಿರುತ್ತಾರೆ. ಫಿರ್ಯಾದುದಾರ/ಎದುರುದಾರ ಪರವಾಗಿ ಸಹಾಯಕ ಅಭಿಯೋಗ ನಿರ್ದೇಶಕರು ಪಿಡಬ್ಲ್ಯು–1 ರಿಂದ ಪಿಡಬ್ಲ್ಯು–4 ರವರನ್ನು ವಿಚಾರಿಸಿರುತ್ತಾರೆ.

ಪಿಡಬ್ಲು–1: ಶ್ರೀ. ಕುಸ್ಲಪ್ಪ ಲಕ್ಷ್ಮಣ ನಾಯ್ಕ ಉಪ ವಲಯ ಅರಣ್ಯಾಧಿಕಾರಿ,
(ಹಾಲಿ ಕರ್ತವ್ಯ ಬಾಳೇಗುಳಿ ಶಾಖೆ, ಅಂಕೋಲಾ ವಲಯ)

ಪಿಡಬ್ಲು–2: ಶ್ರೀ. ವಾಮನ ಸುಬ್ರಾಯ ನಾಯ್ಕ, ಉಪ ವಲಯ ಅರಣ್ಯಾಧಿಕಾರಿ
(ಈಗ ಹಾಲಿ ನಿವೃತ್ತಿ), ವಾಸಸ್ಥಳ: ಮಂಜಗುಣಿ, ಅಂಕೋಲಾ.

ಪಿಡಬ್ಲು–3: ಶ್ರೀ. ಸುರೇಶ ನಾರಾಯಣ ಪಡ್ತಿ, ಅರಣ್ಯ ವೀಕ್ಷಕ, ಸುಂಕಸಾಳ

ಪಿಡಬ್ಲು–4: ಶ್ರೀ. ಕೆ.ಜಿ. ಪ್ರಕಾಶ, ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ
(ಹಾಲಿ ಕರ್ತವ್ಯ ವನ್ಯಜೀವಿ ವಲಯ, ಫಣಸೊಲಿ)

ನಿಶಾನೆ ಪಿ–1 ರಿಂದ ಪಿ–5 ನ್ನು ಹಾಜರುಪಡಿಸಿರುತ್ತಾರೆ.

ನಿಶಾನೆ ಪಿ–1: ಪಂಚನಾಮೆ

ನಿಶಾನೆ ಪಿ–2&: ವಾಹನದ ಛಾಯಾ ಚಿತ್ರ

ನಿಶಾನೆ ಪಿ–4: ಪ್ರಥಮ ಮಾಹಿತಿ ವರದಿ

ನಿಶಾನೆ ಪಿ–5: ಸೀಜರ ರಿಪೋರ್ಟ

7. ಹಾಜರುಪಡಿಸಿದ ಎಲ್ಲಾ ಲಿಖಿತ ದಾಖಲೆಗಳು ಮತ್ತು ಹೇಳಿಕೆಗಳನ್ನು ಆಲಿಸಿ, ಪರಿಶೀಲಿಸಿದ ನಂತರ ಕೆಳಗಿನ ಪ್ರಶ್ನೆಗಳು ಉದ್ಭವಿಸುತ್ತವೆ.

ಅ) ಈ ಪ್ರಕರಣದಲ್ಲಿ ಸರ್ಕಾರಿ ಸ್ವತ್ತುಗಳಾದ ಸಾಗ ನಗಗಳು 45=3.222 ಘ.ಮೀ. ಅಧಿಕೃತ ಪಾಸ್ ಯಾ ಫರ್ಮಿಟ್ ಇಲ್ಲದೆ ಸಾಗಿಸುತ್ತಿದ್ದ ಬಗ್ಗೆ ಗುನ್ನೆ ದಾಖಲಾಗಿದೆಯೇ? ಹಾಗೂ ಅದನ್ನು ಎದುರುದಾರರು ಸಾಬೀತುಪಡಿಸುತ್ತಾರೆಯೇ?

ಆ) ಈ ಮೇಲೆ ನಮೂದಿಸಿದ ಸಾಗ ನಗಗಳು ಕಳ್ಳ ಸಾಗಾಣಿಕೆ ಮಾಡುವಲ್ಲಿ ಟಾಟಾ ಟ್ರಕ್ ವಾಹನ ಸಂಖ್ಯೆ: KA-30/251 ಉಪಯೋಗ ಮಾಡಲಾಗಿದೆಯೇ? ಹಾಗೂ ಅದನ್ನು ಎದುರುದಾರರು ಸಾಬೀತುಪಡಿಸುತ್ತಾರೆಯೇ?

ಇ) ಈ ಗುನ್ನೆಯನ್ನು ವಾಹನದ ಮಾಲೀಕ/ಅಪಾದಿತನು/ಅರ್ಜಿದಾರನು ವಾಹನದ ಜವಾಬ್ದಾರಿ ಹೊಂದಿದ ವ್ಯಕ್ತಿಯಾಗಿ ಗೊತ್ತಿದ್ದು ಮಾಡಿದ್ದಾರೆಯೇ? ಹಾಗೂ ಅವರು ಈ ಗುನ್ನೆಯಲ್ಲಿ ಶಾಮೀಲಾಗಿದ್ದಾರೆಯೇ?

ಈ) ಈ ವಾಹನವನ್ನು ಅರಣ್ಯ ಕಾಯಿದೆ 71ಎ ನಿಯಮದಡಿ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ ನಂ. (ಅ) –– ಹೌದು

ಅಂಶ ನಂ. (ಆ) –– ಹೌದು

ಅಂಶ ನಂ. (ಇ) –– ಹೌದು

ಅಂಶ ನಂ. (ಈ) –– ಹೌದು

ಇದಕ್ಕೆ ಕಾರಣಗಳನ್ನು ಈ ಕೆಳಗಿನಂತೆ ವಿವರಿಸುತ್ತೇನೆ.

ವಿಚಾರಣೆ ಕಾಲಕ್ಕೆ ನೀಡಲಾದ ಹೇಳಿಕೆಗಳು:

ಅಂಶ ನಂ (ಅ):

ಪಿ.ಡಬ್ಲು–1 ಶ್ರೀ. ಕುಸ್ಲಪ್ಪ ಲಕ್ಷ್ಮಣ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ ಜನೇವರಿ–2004 ರಿಂದ 2006 ರ ವರೆಗೆ ನಾನು ಸುಂಕಸಾಳದಲ್ಲಿ ಶಾಖಾ ವನಪಾಲಕನಾಗಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ಅಲ್ಲಿ ಕಾಮಗಾರಿ ವನಪಾಲಕರಾಗಿ ವಿ.ಎಸ್. ನಾಯ್ಕ ಹಾಗೂ ಸುರೇಶ ಪಡ್ತಿ ಯವರು ಅರಣ್ಯ ರಕ್ಷಕರಾಗಿ ಕೆಲಸ ಮಾಡುತ್ತಿದ್ದರು. ದಿನಾಂಕ: 19–02–2004 ರಂದು ರಾತ್ರಿ ನಾಗೇಶ ಮಹಾಲಕ್ಷ್ಮಿ ಹೆಸರಿನ ವಾಹನದಲ್ಲಿ ಸುಂಕಸಾಳ ಶಾಖಾ ಅಧೀನದಲ್ಲಿ ಸಾಗವಾನಿ ತುಂಡುಗಳನ್ನು ಸಾಗಿಸುತ್ತಿರುವ ಬಗ್ಗೆ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರಿಗೆ ಮಾಹಿತಿ ಬಂದಿತು. ಈ ವಿಷಯವನ್ನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ರಾತ್ರಿ ಗಸ್ತು ಕರ್ತವ್ಯದಲ್ಲಿದ್ದ ನನಗೆ ಮತ್ತು ಶಾಖಾ ವನಪಾಲಕ ಮಾಸ್ತಿಕಟ್ಟಾ ಶ್ರೀ.ಹೆಚ್.ವಿ.. ನಾಯ್ಕ ಮತ್ತು ಬೀಟ ಗಾರ್ಡ ಶ್ರೀ. ಬಿ.ಜಿ. ರಾಣೆ, ಅಗಸೂರು ಹಾಗೂ ಕಾಮಗಾರಿ ವನಪಾಲಕರಾದ ವಿ.ಎಸ್. ನಾಯ್ಕ, ಅರಣ್ಯ ವೀಕ್ಷಕ ಸುರೇಶ ಪಡ್ತಿ ಮತ್ತು ಅರಣ್ಯ ರಕ್ಷಕರಾದ ಸಿ.ಡಿ. ಗುನಗಿ ಯವರಿಗೆ ತಿಳಿಸಿದರು. ನಂತರ ಈ ಮೇಲೆ ಹೇಳಿದ ನಾವೆಲ್ಲರೂ ಖಾಸಗಿ ವಾಹನ ಸಂಖ್ಯೆ: ಕೆಎ–14/ಎಂ.9001 ರಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಗಸ್ತಿಗೆ ಹೋದೆವು. ಈ ರೀತಿ ನಾವು ಸುಂಕಸಾಳ ಹೈಲ್ಯಾಂಡ್ ಹೋಟೆಲ್ ವರೆಗೆ ಹೋದೆವು. ಪುನ: ತಿರುಗಿ ಬಂದು ಸುಂಕಸಾಳ ರಣಕಂಬದ ಹತ್ತಿರ ನಮ್ಮಲ್ಲಿದ್ದ ಮೂರು ಸಿಬ್ಬಂದಿಗಳನ್ನು ಅಲ್ಲಿ ಇಳಿಸಿದೆವು. ನಾನು ಹಾಗೂ ಇತರೇ ಸಿಬ್ಬಂದಿಗಳು ಖಾಸಗಿ ವಾಹನ ಸಮೇತ ಮಾಸ್ತಿಕಟ್ಟಾ ಸಮೀಪ ಹೊಸಕಂಬಿ ಓಣಿಗೆ ಬಂದೆವು. ಬಂದು ವಾಹನ ಶೋಧ ಕಾರ್ಯದಲ್ಲಿ ತೊಡಗಿದೆವು. ಮಾಹಿತಿ ಬಂದ ವಾಹನ ಬರದೇ ಇದ್ದ ಕಾರಣ ಬೆಳಗಿನ ಜಾವ ನಾವು ಅಗಸೂರಿಗೆ ಹೋದೆವು. ಅಗಸೂರಿನಲ್ಲಿ ಎನ್.ಹೆಚ್.–63 ರ ಬದಿಗೆ ಮಂಗಳೂರು ಹೋಟೆಲ ಇದ್ದು ಅದರ ಬದಿಯಲ್ಲಿ ನಮಗೆ ಮಾಹಿತಿ ಬಂದ ವಾಹನ ಸಂಖ್ಯೆ: ಕೆಎ–30/251 ನಾಗೇಶ ಮಹಾಲಕ್ಷ್ಮಿ ಎಂಬ ಹೆಸರಿದ್ದ ಒಂದು ಟ್ರಕ್ಕು ನಿಂತಿತ್ತು. ಸದರಿ ಟ್ರಕ್ಕಿಗೆ ತಾಡಪತ್ರಿಯಿಂದ ಪೂರ್ತಿಯಾಗಿ ಮುಚ್ಚಲಾಗಿತ್ತು. ನಾನು ಹಾಗೂ ಇತರೇ ಸಿಬ್ಬಂದಿಗಳು ಸೇರಿ ಸದರಿ ಟ್ರಕ್ಕನ್ನು ಪರೀಕ್ಷೆ ಮಾಡಿದೆವು. ಅದರಲ್ಲಿ ಸುಮಾರು 50 ಚೀಲ ಭತ್ತದ ಉಮ್ಮಿ ತುಂಬಿದ ಚೀಲಗಳು ಕಂಡು ಬಂದವು. ವಾಹನದಲ್ಲಿ ವಾಹನದ ಚಾಲಕನಾದ ಶ್ರೀ. ಗೋವಿಂದ ಬೇಡು ನಾಯ್ಕ ಇತರರು ಇದ್ದು ಇತನನ್ನು ಈ ಉಮ್ಮಿ ಚೀಲಗಳ ಬಗ್ಗೆ ವಿಚಾರಿಸಲಾಗಿ ಅದನ್ನು ಇಡಗುಂದಿ ಮಿಲ್ಲಿನಿಂದ ತಂದಿರುವದಾಗಿ ತಿಳಿಸಿದರು. ಅದಕ್ಕೂ ಮೊದಲು ಅಂಕೋಲಾದಿಂದ ಅದೇ ವಾಹನದಲ್ಲಿ ಕೆಂಪು ಚೀರೆ ಕಲ್ಲನ್ನು ಇಡಗುಂದಿಗೆ ಸಾಗಿಸಿರುವದಾಗಿ ತಿಳಿಸಿರುತ್ತಾನೆ. ಆದರೆ ವಾಹನ ಪರಿಶೀಲಿಸಲಾಗಿ, ಅದರಲ್ಲಿ ಕೆಂಪು ಕಲ್ಲು ತುಂಬಿದ ಬಗ್ಗೆ ಯಾವುದೇ ಕುರುಹುಗಳು ಕಂಡು ಬಾರದೇ

ಇದ್ದದರಿಂದ ಹೆಚ್ಚಿನ ತನಿಖೆಗಾಗಿ ಸದರಿ ವಾಹನವನ್ನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾರವರ ಕಚೇರಿಗೆ ತರಲಾಯಿತು. ನಾವು ವಾಹನ ಪರೀಕ್ಷೆ ಮಾಡುವ ಕಾಲಕ್ಕೆ ವಾಹನದಲ್ಲಿ ಓರ್ವ ಮಂಜುನಾಥ ಗಣಪತಿ ನಾಯ್ಕ ಸಹ ಇದ್ದರು. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ರವರಾದ ಶ್ರೀ. ಪ್ರಕಾಶ ರವರು ಗೋವಿಂದ ಬೇಡು ನಾಯ್ಕ ಇತನ ಹತ್ತಿರ ಈ ಬಗ್ಗೆ ದೀರ್ಘ ವಿಚಾರಣೆ ನಡೆಸಿದ್ದು ಆಗ ಗೋವಿಂದ ಬೇಡು ನಾಯ್ಕ ಇತನು ತಾನು ಸದರಿ ವಾಹನದಲ್ಲಿ ಸಾಗವಾನಿ ತುಂಡುಗಳನ್ನು ತುಂಬಲು ಬಂದಿದ್ದು ನಿಜವೆಂದು ತಿಳಿಸಿರುತ್ತಾನೆ. ಹಾಗೂ ತಾನು ಸಂಜು ಪಾಂಡುರಂಗ ನಾಯ್ಕ, ಅಂಕೋಲಾ ಇವರ ಸಲಹೆ ಮೇರೆಗೆ ಹೆಬ್ಬುಳ ಹಾಗೂ ಸುಂಕಸಾಳ ಅರಣ್ಯ ಪ್ರದೇಶದಲ್ಲಿ ತಯಾರಿಸಿಟ್ಟ ತುಂಡುಗಳನ್ನು ತರಲು ಹೊರಟ್ಟಿದ್ದಾಗಿ ತಿಳಿಸಿದನು. ಮತ್ತು ಈ ರೀತಿ ತಾನು ಸಾಗವಾನಿ ತುಂಡುಗಳನ್ನು ತುಂಬಲು ಹೋಗಬೇಕಾದರೆ ತಾನು ಊಟ ಮಾಡಲು ನಿಂತ ದಾಬಾ ದ ಬಳಿ ಸಂಜು ಪಾಂಡುರಂಗ ನಾಯ್ಕ ಇತನು ಬಂದು ಅರಣ್ಯ ಸಿಬ್ಬಂದಿಗಳಿಗೆ ಸಂಶಯ ಬಂದ ಕಾರಣ ಸಾಗ ತುಂಡುಗಳನ್ನು ತುಂಬುವದು ಬೇಡ ಎಂದ ಕಾರಣ ತಾನು ಅಲ್ಲಿಯೇ ವಾಹನವನ್ನು ನಿಲ್ಲಿಸಿಟ್ಟ ಬಗ್ಗೆ ಹೇಳಿದನು. ಮತ್ತು ಭತ್ತದ ಉಮ್ಮಿಯ ಚೀಲಗಳನ್ನು ತೆಗೆದುಕೊಂಡು ಹೋಗಿ ಸಾಗವಾನಿ ತುಂಡುಗಳನ್ನು ತುಂಬಿ ಬರಲು ಯೋಜನೆ ಮಾಡಿದ ಬಗ್ಗೆ ತಿಳಿಸಿದನು. ಹಾಗೂ ಸದರಿ ಸಾಗವಾನಿ ತುಂಡುಗಳನ್ನು ಇಟ್ಟ ಸ್ಥಳವನ್ನು ತಾನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಗೋವಿಂದ ಹಾಗೂ ಮಂಜು ಮತ್ತು ನಾವು ಸಿಬ್ಬಂದಿಗಳು ಸುಂಕಸಾಳಕ್ಕೆ ಹೋದೆವು. ಗೋವಿಂದ ಬೇಡು ನಾಯ್ಕ ಇತನು ನಮ್ಮನ್ನು ಸುಂಕಸಾಳ ಬ್ಲಾಕ್ 24 ಮತ್ತು 25ರಲ್ಲಿ ಕರೆದುಕೊಂಡು ಹೋಗಿ ದಾಸ್ತಾನು ಇಟ್ಟ ಸಾಗ ತುಂಡುಗಳನ್ನು ತೋರಿಸಿದ್ದು ಅದನ್ನು ನಾವು ಪರಿಶೀಲನೆ ಮಾಡಿದ್ದೆವು. ಪರಿಶೀಲಿಸಿ ನೋಡಲಾಗಿ ಅಲ್ಲಿ ಒಟ್ಟೂ 45 ಸಾಗವಾನಿ ತುಂಡುಗಳು ಇದ್ದು ಅದಕ್ಕೆ ಯಾವುದೇ ಇಲಾಖಾ ಛಪ್ಪಾ ವಗೈರೆ ಇರಲಿಲ್ಲ. ಅದನ್ನು ಅಳತೆ ಮಾಡಲಾಗಿ ಒಟ್ಟೂ 3.222 ಘ.ಮೀ. ಇದ್ದು ಪ್ರತಿಯೊಂದು ತುಂಡುಗಳಿಗೆ ನಂಬರನ್ನು ಹಾಗಿ ಗುನ್ನಾ ಛಪ್ಪಾವನ್ನು ಹಾಕಲಾಯಿತು. ಸದರ ಸಾಗವಾನಿ ತುಂಡು ಇದ್ದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಸಾಗ ತುಂಡುಗಳನ್ನು ಜಪ್ತಪಡಿಸಿಕೊಂಡೆವು. ನಂತರ ಆರೋಪಿತರು ಹಾಗೂ ಜಪ್ತಪಡಿಸಿದ ಸಾಗವಾನಿ ತುಂಡುಗಳನ್ನು ಖಾಸಗಿ ವಾಹನದಲ್ಲಿ ತುಂಬಿಕೊಂಡು ಮರಳಿ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರ ಕಚೇರಿಗೆ ಬಂದು ನಮ್ಮ ಪಂಚನಾಮೆಯನ್ನು ಮುಂದುವರಿಸಿ ಕಚೇರಿ ಎದುರಗಡೆಯಿದ್ದ ವಾಹನ ಸಂಖ್ಯೆ: ಕೆಎ–30/251 ಟ್ರಕ್ಕನ್ನು ಜಪ್ತಪಡಿಸಿಕೊಂಡೆವು. ಆರೋಪಿತರು ಸದರಿ ವಾಹನದ ಮುಖಾಂತರ ಜಪ್ತಪಡಿಸಿಕೊಂಡ ಸಾಗವಾನಿ ತುಂಡುಗಳನ್ನು ಅನಧಿಕೃತವಾಗಿ ಸಾಗಾಟ ಮಾಡುವ ಉದ್ದೇಶ ಹೊಂದಿದ್ದರಿಂದ ನಾವು ಸದರಿ ವಾಹನವನ್ನು ಪಂಚನಾಮೆಯೊಂದಿಗೆ ಜಪ್ತಪಡಿಸಿಕೊಂಡಿದ್ದೆವು. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಈ ಬಗ್ಗೆ ಗೋವಿಂದ ಬೇಡು ನಾಯ್ಕ ಇತನ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತಾರೆ. ಪಂಚನಾಮೆ ಹಾಗೂ ಸಹಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ ಅದನ್ನು ನಿ.ಪಿ.–1 ಎಂದು ಸಾಕ್ಷಿ ಸಹಿಯನ್ನು ನಿ.ಪಿ–1ಎ ಎಂದು ಗುರುತಿಸಲಾಯಿತು. ನಾವು ಜಪ್ತಪಡಿಸಿಕೊಂಡ ಟ್ರಕ ನಂ ಕೆಎ–30/251ನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಟ್ರಕ್ಕಿನ ಛಾಯಾ ಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿ.ಪಿ–2 ಮತ್ತು 3 ಎಂದು ಗುರುತಿಸಲಾಯಿತು. ಸದರಿ ಟ್ರಕ್ಕನ್ನು ಈಗ ಮಾನ್ಯ ನ್ಯಾಯಾಲಯದ ಆವರಣದಲ್ಲಿ ನೋಡುತ್ತಿದ್ದು ಅದನ್ನು ಮು.ಮಾ.–1 ಎಂದು ಗುರುತಿಸಲಾಯಿತು. ನಂತರ ಈ ಬಗ್ಗೆ ನಾನು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ್ದು ಪ್ರ.ವಾ ವರದಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿ ನೋಡಿದ ಪ್ರ.ವಾ ವರದಿಯನ್ನು ನಿ.ಪಿ–4 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ.ಪಿ–4ಎ ಎಂದು ಗುರುತಿಸಲಾಯಿತು. ಸಾರ್ವಜನಿಕರು ನಿ.ಪಿ–1 ಪಂಚನಾಮೆ ಕಾಲಕ್ಕೆ ಯಾರೂ ಬರದೇ ಇದ್ದ ಕಾರಣ ಇಲಾಖಾ ಸಿಬ್ಬಂದಿಯನ್ನೇ ಪಂಚರನ್ನಾಗಿ ತೆಗೆದುಕೊಳ್ಳಲಾಯಿತು. ನಂತರ ಮುಂದಿನ ಕ್ರಮಕ್ಕಾಗಿ ಆರೋಪಿತರನ್ನು ವಲಯ ಅರಣ್ಯಾಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ದಿನಾಂಕ: 21–2–2004 ರಂದು ಸುಂಕಸಾಳ ವಾಚಮನ್‌ರ ಸಹಾಯದಿಂದ ಜಪ್ತಪಡಿಸಿದ ಸಾಗ ತುಂಡುಗಳ ಬುಡಚಿಯನ್ನು ಹುಡುಕಿದೆವು. ಸುಂಕಸಾಳ ಬ್ಲಾಕ್ 24–25 ರಲ್ಲಿ 14 ಬುಡಚಿಗಳು ಸಿಕ್ಕಿದ್ದು ಈ ಬಗ್ಗೆ ಪಂಚನಾಮೆ ಮಾಡಿರುತ್ತೇನೆ. ನಂತರ ಈ ಬಗ್ಗೆ ಜಪ್ತ ವರದಿಯನ್ನು ಮಾನ್ಯ ವಲಯ ಅರಣ್ಯಾಧಿಕಾರಿಗಳು ತಯಾರಿಸಿದ್ದಾರೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಸದರಿ ಜಪ್ತು ವರದಿಯನ್ನು ನಿ.ಪಿ–5ಎಂದು ಗುರುತಿಸಲಾಯಿತು. ನಂತರ ತನಿಖೆ ಕೈಕೊಂಡು ತನಿಖಾ ವರದಿಯನ್ನು ವಲಯ ಅರಣ್ಯಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ವಲಯ ಅರಣ್ಯಾಧಿಕಾರಿಗಳು ಈ ಬಗ್ಗೆ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಅರ್ಜಿದಾರನು ಈ ಪ್ರಕರಣದ ಆರೋಪಿತನಾಗಿದ್ದು ವಾಹನ ನಂ. ಕೆಎ–30/251 ಟ್ರಕ್ಕನ್ನು ಅನಧಿಕೃತವಾಗಿ ಅರಣ್ಯ ಉತ್ಪನ್ನಗಳನ್ನು ಸಾಗಾಟ ಮಾಡುವ ಉದ್ದೇಶ ಹೊಂದಿ ಅದಕ್ಕೆ ಪ್ರಯತ್ನಿಸಿದ್ದರಿಂದ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಬೇಕೆಂದು ನನ್ನ ಪ್ರಾರ್ಥನೆ ಇದೆ. ಅರ್ಜಿದಾರನಾದ ಆರೋಪಿ ವಾಹನ ಚಾಲಕ ಗೋವಿಂದ ಬೇಡು ನಾಯ್ಕ ಇತನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಅರ್ಜಿದಾರರು ಗೈರು ಇರುತ್ತಾರೆ) ಎಂದು ಹೇಳಿಕೆ ನೀಡಿರುತ್ತಾರೆ.

ಪಾಟೀ ಸವಾಲು :

ಅರ್ಜಿದಾರರು ಹಾಗೂ ಆತನ ವಕೀಲರನ್ನು ಕರೆಯಿಸಲಾಯಿತು. ಅರ್ಜಿದಾರರು ಹಾಗೂ ಅವರ ವಕೀಲರು ಹಾಜರು ಇರುವುದಿಲ್ಲ. ಕಾರಣ, ಪಾಟೀ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

ಪಿಡಬ್ಲ್ಯು–2 ಶ್ರೀ. ವಾಮನ ಸುಬ್ರಾಯ ನಾಯ್ಕ, ಸಾ: ಮಂಜಗುಣಿ ಇವರು ತಮ್ಮ ಸಾಕ್ಷ್ಯದಲ್ಲಿ ನಾನು 1995 ರಿಂದ 2005 ರ ವರಗೆ ನಾನು ಕಾಮಗಾರಿ ವನಪಾಲಕ ಮಾಸ್ತಿಕಟ್ಟಾ ಎಂತಾ ಕೆಲಸ ಮಾಡಿರುತ್ತೇನೆ. ಪ್ರಸ–1 ಇವರು 2002 ರಿಂದ 2004 ರ ಕಾಲಕ್ಕೆ ಶಾಖಾ ವನಪಾಲಕ, ಸುಂಕಸಾಳ ಎಂತಾ ಕೆಲಸ ಮಾಡುತ್ತಿದ್ದರು. ದಿನಾಂಕ: 19–02–2004 ರಂದು ರಾತ್ರಿ ನಾಗೇಶ ಮಹಾಲಕ್ಷ್ಮಿ ಹೆಸರಿನ ವಾಹನದಲ್ಲಿ ಸುಂಕಸಾಳ ಶಾಖಾ ಅಧೀನದಲ್ಲಿ ಸಾಗವಾನಿ ತುಂಡುಗಳನ್ನು ಸಾಗಿಸುತ್ತಿರುವ ಬಗ್ಗೆ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರಿಗೆ ಮಾಹಿತಿ ಬಂದಿತು. ಈ ವಿಷಯವನ್ನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ರಾತ್ರಿ ಗಸ್ತು ಕರ್ತವ್ಯದಲ್ಲಿದ್ದ ನನಗೆ ಮತ್ತು ಶಾಖಾ ವನಪಾಲಕ ಮಾಸ್ತಿಕಟ್ಟಾ ಶ್ರೀ.ಹೆಚ್.ವಿ.. ನಾಯ್ಕ ಮತ್ತು ಬೀಟ ಗಾರ್ಡ ಶ್ರೀ. ಬಿ.ಜಿ. ರಾಣೆ, ಅಗಸೂರು ಹಾಗೂ ಸುಂಕಸಾಳ ಶಾಖಾ ವನಪಾಲಕರಾದ ಕೆ.ಎಲ್. ನಾಯ್ಕ, ಅರಣ್ಯ ರಕ್ಷಕರಾದ ಸುರೇಶ ಪಡ್ತಿ ಮತ್ತು ಅರಣ್ಯ ವೀಕ್ಷಕರಾದ ಸಿ.ಡಿ. ಗುನಗಿ ಯವರಿಗೆ ತಿಳಿಸಿದರು. ನಂತರ ಈ ಮೇಲೆ ಹೇಳಿದ ನಾವೆಲ್ಲರೂ ಖಾಸಗಿ ವಾಹನ ಸಂಖ್ಯೆ: ಕೆಎ–14/ಎಂ.9001 ರಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಗಸ್ತಿಗೆ ಹೋದೆವು. ಈ ರೀತಿ ನಾವು ಸುಂಕಸಾಳ ಹೈಲ್ಯಾಂಡ್ ಹೋಟೆಲ್ ವರೆಗೆ ಹೋದೆವು. ಪುನ: ತಿರುಗಿ ಬಂದು ಸುಂಕಸಾಳ ರಣಕಂಬದ ಹತ್ತಿರ ನಮ್ಮಲ್ಲಿದ್ದ ಮೂರು ಸಿಬ್ಬಂದಿಗಳನ್ನು ಅಲ್ಲಿ ಇಳಿಸಿದೆವು. ನಾನು ಹಾಗೂ ಇತರೇ ಸಿಬ್ಬಂದಿಗಳು ಖಾಸಗಿ ವಾಹನ ಸಮೇತ ಮಾಸ್ತಿಕಟ್ಟಾ ಸಮೀಪ ಹೊಸಕಂಬಿ ಓಣಿಗೆ ಬಂದೆವು. ಬಂದು ವಾಹನ ಶೋಧ ಕಾರ್ಯದಲ್ಲಿ ತೊಡಗಿದೆವು. ಮಾಹಿತಿ ಬಂದ ವಾಹನ ಬರದೇ ಇದ್ದ ಕಾರಣ ಬೆಳಗಿನ ಜಾವ ನಾವು ಅಗಸೂರಿಗೆ ಹೋದೆವು. ಅಗಸೂರಿನಲ್ಲಿ ಎನ್.ಹೆಚ್.–63 ರ ಬದಿಗೆ ಮಂಗಳೂರು ಹೋಟೆಲ ಇದ್ದು ಅದರ ಬದಿಯಲ್ಲಿ ನಮಗೆ ಮಾಹಿತಿ ಬಂದ ವಾಹನ ಸಂಖ್ಯೆ: ಕೆಎ–30/251 ನಾಗೇಶ ಮಹಾಲಕ್ಷ್ಮಿ ಎಂಬ ಹೆಸರಿದ್ದ ಒಂದು ಟ್ರಕ್ಕು ನಿಂತಿತ್ತು. ಸದರಿ ಟ್ರಕ್ಕಿಗೆ ತಾಡಪತ್ರಿಯಿಂದ ಪೂರ್ತಿಯಾಗಿ ಮುಚ್ಚಲಾಗಿತ್ತು. ನಾನು ಹಾಗೂ ಇತರೇ ಸಿಬ್ಬಂದಿಗಳು ಸೇರಿ ಸದರಿ ಟ್ರಕ್ಕನ್ನು ಪರೀಕ್ಷೆ ಮಾಡಿದೆವು. ಅದರಲ್ಲಿ ಸುಮಾರು 50 ಚೀಲ ಭತ್ತದ ಉಮ್ಮಿ ತುಂಬಿದ ಚೀಲಗಳು ಕಂಡು ಬಂದವು.

ವಾಹನದಲ್ಲಿ ವಾಹನದ ಚಾಲಕನಾದ ಶ್ರೀ. ಗೋವಿಂದ ಬೇಡು ನಾಯ್ಕ ಇತರರು ಇದ್ದು ಇತನನ್ನು ಈ ಉಮ್ಮಿ ಚೀಲಗಳ ಬಗ್ಗೆ ವಿಚಾರಿಸಲಾಗಿ ಅದನ್ನು ಇಡಗುಂದಿ ಮಿಲ್ಲಿನಿಂದ ತಂದಿರುವದಾಗಿ ತಿಳಿಸಿದರು. ಅದಕ್ಕೂ ಮೊದಲು ಅಂಕೋಲಾದಿಂದ ಅದೇ ವಾಹನದಲ್ಲಿ ಕೆಂಪು ಚೀರೆ ಕಲ್ಲನ್ನು ಇಡಗುಂದಿಗೆ ಸಾಗಿಸಿರುವದಾಗಿ ತಿಳಿಸಿರುತ್ತಾನೆ. ಆದರೆ ವಾಹನ ಪರಿಶೀಲಿಸಲಾಗಿ, ಅದರಲ್ಲಿ ಕೆಂಪು ಕಲ್ಲು ತುಂಬಿದ ಬಗ್ಗೆ ಯಾವುದೇ ಕುರುಹುಗಳು ಕಂಡು ಬಾರದೇ ಇದ್ದದರಿಂದ ಹೆಚ್ಚಿನ ತನಿಖೆಗಾಗಿ ಸದರಿ ವಾಹನವನ್ನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾರವರ ಕಚೇರಿಗೆ ತರಲಾಯಿತು. ನಾವು ವಾಹನ ಪರೀಕ್ಷೆ ಮಾಡುವ ಕಾಲಕ್ಕೆ ವಾಹನದಲ್ಲಿ ಓರ್ವ ಮಂಜುನಾಥ ಗಣಪತಿ ನಾಯ್ಕ ಸಹ ಇದ್ದರು. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ರವರಾದ ಶ್ರೀ. ಪ್ರಕಾಶ ರವರು ಗೋವಿಂದ ಬೇಡು ನಾಯ್ಕ ಇತನ ಹತ್ತಿರ ಈ ಬಗ್ಗೆ ದೀರ್ಘ ವಿಚಾರಣೆ ನಡೆಸಿದ್ದು ಆಗ ಗೋವಿಂದ ಬೇಡು ನಾಯ್ಕ ಇತನು ತಾನು ಸದರಿ ವಾಹನದಲ್ಲಿ ಸಾಗವಾನಿ ತುಂಡುಗಳನ್ನು ತುಂಬಲು ಬಂದಿದ್ದು ನಿಜವೆಂದು ತಿಳಿಸಿರುತ್ತಾನೆ. ಹಾಗೂ ತಾನು ಸಂಜು ಪಾಂಡುರಂಗ ನಾಯ್ಕ, ಅಂಕೋಲಾ ಇವರ ಸಲಹೆ ಮೇರೆಗೆ ಹೆಬ್ಬುಳ ಹಾಗೂ ಸುಂಕಸಾಳ ಅರಣ್ಯ ಪ್ರದೇಶದಲ್ಲಿ ತಯಾರಿಸಿಟ್ಟ ತುಂಡುಗಳನ್ನು ತರಲು ಹೊರಟ್ಟಿದ್ದಾಗಿ ತಿಳಿಸಿದನು. ಮತ್ತು ಈ ರೀತಿ ತಾನು ಸಾಗವಾನಿ ತುಂಡುಗಳನ್ನು ತುಂಬಲು ಹೋಗಬೇಕಾದರೆ ತಾನು ಊಟ ಮಾಡಲು ನಿಂತ ದಾಬಾ ದ ಬಳಿ ಸಂಜು ಪಾಂಡುರಂಗ ನಾಯ್ಕ ಇತನು ಬಂದು ಅರಣ್ಯ ಸಿಬ್ಬಂದಿಗಳಿಗೆ ಸಂಶಯ ಬಂದ ಕಾರಣ ಸಾಗ ತುಂಡುಗಳನ್ನು ತುಂಬುವದು ಬೇಡ ಎಂದ ಕಾರಣ ತಾನು ಅಲ್ಲಿಯೇ ವಾಹನವನ್ನು ನಿಲ್ಲಿಸಿಟ್ಟ ಬಗ್ಗೆ ಹೇಳಿದನು. ಮತ್ತು ಭತ್ತದ ಉಮ್ಮಿಯ ಚೀಲಗಳನ್ನು ತೆಗೆದುಕೊಂಡು ಹೋಗಿ ಸಾಗವಾನಿ ತುಂಡುಗಳನ್ನು ತುಂಬಿ ಬರಲು ಯೋಜನೆ ಮಾಡಿದ ಬಗ್ಗೆ ತಿಳಿಸಿದನು. ಹಾಗೂ ಸದರಿ ಸಾಗವಾನಿ ತುಂಡುಗಳನ್ನು ಇಟ್ಟ ಸ್ಥಳವನ್ನು ತಾನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಗೋವಿಂದ ಹಾಗೂ ಮಂಜು ಮತ್ತು ನಾವು ಸಿಬ್ಬಂದಿಗಳು ಸುಂಕಸಾಳಕ್ಕೆ ಹೋದೆವು. ಗೋವಿಂದ ಬೇಡು ನಾಯ್ಕ ಇತನು ನಮ್ಮನ್ನು ಸುಂಕಸಾಳ ಬ್ಲಾಕ್ 24 ಮತ್ತು 25ರಲ್ಲಿ ಕರೆದುಕೊಂಡು ಹೋಗಿ ದಾಸ್ತಾನು ಇಟ್ಟ ಸಾಗ ತುಂಡುಗಳನ್ನು ತೋರಿಸಿದ್ದು ಅದನ್ನು ನಾವು ಪರಿಶೀಲನೆ ಮಾಡಿದ್ದೆವು. ಪರಿಶೀಲಿಸಿ ನೋಡಲಾಗಿ ಅಲ್ಲಿ ಒಟ್ಟೂ 45 ಸಾಗವಾನಿ ತುಂಡುಗಳು ಇದ್ದು ಅದಕ್ಕೆ ಯಾವುದೇ ಇಲಾಖಾ ಛಪ್ಪಾ ವಗೈರೆ ಇರಲಿಲ್ಲ. ಅದನ್ನು ಅಳತೆ ಮಾಡಲಾಗಿ ಒಟ್ಟೂ 3.222 ಘ.ಮೀ. ಇದ್ದು ಪ್ರತಿಯೊಂದು ತುಂಡುಗಳಿಗೆ ನಂಬರನ್ನು ಹಾಗಿ ಗುನ್ನಾ ಛಪ್ಪಾವನ್ನು ಹಾಕಲಾಯಿತು. ಸದರ ಸಾಗವಾನಿ ತುಂಡು ಇದ್ದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಸಾಗ ತುಂಡುಗಳನ್ನು ಜಪ್ತಪಡಿಸಿಕೊಂಡೆವು. ನಂತರ ಆರೋಪಿತರು ಹಾಗೂ ಜಪ್ತಪಡಿಸಿದ ಸಾಗವಾನಿ ತುಂಡುಗಳನ್ನು ಖಾಸಗಿ ವಾಹನದಲ್ಲಿ ತುಂಬಿಕೊಂಡು ಮರಳಿ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರ ಕಚೇರಿಗೆ ಬಂದು ನಮ್ಮ ಪಂಚನಾಮೆಯನ್ನು ಮುಂದುವರಿಸಿ ಕಚೇರಿ ಎದುರಗಡೆಯಿದ್ದ ವಾಹನ ಸಂಖ್ಯೆ: ಕೆಎ–30/251 ಟ್ರಕ್ಕನ್ನು ಜಪ್ತಪಡಿಸಿಕೊಂಡೆವು. ಆರೋಪಿತರು ಸದರಿ ವಾಹನದ ಮುಖಾಂತರ ಜಪ್ತಪಡಿಸಿಕೊಂಡ ಸಾಗವಾನಿ ತುಂಡುಗಳನ್ನು ಅನಧಿಕೃತವಾಗಿ ಸಾಗಾಟ ಮಾಡುವ ಉದ್ದೇಶ ಹೊಂದಿದ್ದರಿಂದ ನಾವು ಸದರಿ ವಾಹನವನ್ನು ಪಂಚನಾಮೆಯೊಂದಿಗೆ ಜಪ್ತಪಡಿಸಿಕೊಂಡಿದ್ದೆವು. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಈ ಬಗ್ಗೆ ಗೋವಿಂದ ಬೇಡು ನಾಯ್ಕ ಇತನ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತಾರೆ. ಪಂಚನಾಮೆ ಹಾಗೂ ಸಹಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ ಅದನ್ನು ಈಗಾಗಲೇ ನಿ.ಪಿ.–1 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿ.ಪಿ–1ಬಿ ಎಂದು ಗುರುತಿಸಲಾಯಿತು. ನಾವು ಜಪ್ತಪಡಿಸಿಕೊಂಡ ಟ್ರಕ ನಂ ಕೆಎ–30/251ನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಟ್ರಕ್ಕಿನ ಛಾಯಾ ಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿ.ಪಿ–2 ಮತ್ತು 3 ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಟ್ರಕ್ಕನ್ನು ಈಗ ಮಾನ್ಯ ನ್ಯಾಯಾಲಯದ ಆವರಣದಲ್ಲಿ ನೋಡುತ್ತಿದ್ದು ಅದನ್ನು ಮು.ಮಾ.–1 ಎಂದು ಗುರುತಿಸಲಾಗಿದೆ.. ನಂತರ ಈ ಬಗ್ಗೆ ಪ್ರಸ–1 ರವರು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಸಾರ್ವಜನಿಕರು ನಿ.ಪಿ–1 ಪಂಚನಾಮೆ ಕಾಲಕ್ಕೆ ಯಾರೂ ಬರದೇ ಇದ್ದ ಕಾರಣ ಇಲಾಖಾ ಸಿಬ್ಬಂದಿಯನ್ನೇ ಪಂಚರನ್ನಾಗಿ ತೆಗೆದುಕೊಳ್ಳಲಾಯಿತು. ನಂತರ ಮುಂದಿನ ಕ್ರಮಕ್ಕಾಗಿ ಆರೋಪಿತರನ್ನು ವಲಯ ಅರಣ್ಯಾಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ದಿನಾಂಕ: 21–2–2004 ರಂದು ಸುಂಕಸಾಳ ವಾಚಮನ್‌ರ ಸಹಾಯದಿಂದ ಜಪ್ತಪಡಿಸಿದ ಸಾಗ ತುಂಡುಗಳ ಬುಡಚೆಯನ್ನು ಹುಡುಕಿದೆವು. ಸುಂಕಸಾಳ ಬ್ಲಾಕ್ 24–25 ರಲ್ಲಿ 14 ಬುಡಚೆಗಳು ಸಿಕ್ಕಿದ್ದು ಈ ಬಗ್ಗೆ ಪಂಚನಾಮೆ ಮಾಡಿರುತ್ತೇನೆ. ವಲಯ ಅರಣ್ಯಾಧಿಕಾರಿಗಳು ಈ ಬಗ್ಗೆ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಅರ್ಜಿದಾರನು ಈ ಪ್ರಕರಣದ ಆರೋಪಿತನಾಗಿದ್ದು ವಾಹನ ನಂ. ಕೆಎ–30/251 ಟ್ರಕ್ಕನ್ನು ಅನಧಿಕೃತವಾಗಿ ಅರಣ್ಯ ಉತ್ಪನ್ನಗಳನ್ನು ಸಾಗಾಟ ಮಾಡುವ ಉದ್ದೇಶ ಹೊಂದಿ ಅದಕ್ಕೆ ಪ್ರಯತ್ನಿಸಿದ್ದರಿಂದ ಸದರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಬೇಕೆಂದು ನನ್ನ ಪ್ರಾರ್ಥನೆ ಇದೆ. ಅರ್ಜಿದಾರನಾದ ಆರೋಪಿ ವಾಹನ ಚಾಲಕ ಗೋವಿಂದ ಬೇಡು ನಾಯ್ಕ ಇತನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಅರ್ಜಿದಾರರು ಗೈರು ಇರುತ್ತಾರೆ) ಎಂದು ಹೇಳಿಕೆ ನೀಡಿರುತ್ತಾರೆ.

ಪಾಟೀ ಸವಾಲು ಅರ್ಜಿದಾರ ಪರ ವಕೀಲರಿಂದ:

ಅರ್ಜಿದಾರರು ಹಾಗೂ ಆತನ ವಕೀಲರನ್ನು ಕರೆಯಿಸಲಾಯಿತು. ಅರ್ಜಿದಾರರು ಹಾಗೂ ಅವರ ವಕೀಲರು ಹಾಜರು ಇರುವುದಿಲ್ಲ. ಕಾರಣ, ಪಾಟೀ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

ಪಿಡಬ್ಲು–3 ಶ್ರೀ. ಸುರೇಶ ನಾರಾಯಣ ಪಡ್ತಿ, ಸಾ: ಸುಂಕಸಾಳ ಇವರು ತಮ್ಮ ಸಾಕ್ಷ್ಯದಲ್ಲಿ ನಾನು 1998ನೇ ಸಾಲಿನಿಂದ ನಾನು ಸುಂಕಸಾಳದಲ್ಲಿ ಅರಣ್ಯ ವೀಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ: 19–02–2004 ರಂದು ರಾತ್ರಿ ನಾಗೇಶ ಮಹಾಲಕ್ಷ್ಮಿ ಹೆಸರಿನ ವಾಹನದಲ್ಲಿ ಸುಂಕಸಾಳ ಶಾಖಾ ಅಧೀನದಲ್ಲಿ ಸಾಗವಾನಿ ತುಂಡುಗಳನ್ನು ಸಾಗಿಸುತ್ತಿರುವ ಬಗ್ಗೆ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರಿಗೆ ಮಾಹಿತಿ ಬಂದಿತು. ಈ ವಿಷಯವನ್ನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ರಾತ್ರಿ ಗಸ್ತು ಕರ್ತವ್ಯದಲ್ಲಿದ್ದ ಶಾಖಾ ವನಪಾಲಕ ಮಾಸ್ತಿಕಟ್ಟಾ ಶ್ರೀ.ಹೆಚ್.ವಿ.. ನಾಯ್ಕ ಮತ್ತು ಬೀಟ ಗಾರ್ಡ ಶ್ರೀ. ಬಿ.ಜಿ. ರಾಣೆ, ಅಗಸೂರು ಹಾಗೂ ಸುಂಕಸಾಳ ಶಾಖಾ ವನಪಾಲಕರಾದ ಕೆ.ಎಲ್. ನಾಯ್ಕ, ಅರಣ್ಯ ರಕ್ಷಕ ಸಿ.ಡಿ. ಗುನಗಿ ಹಾಗೂ ನನಗೆ ತಿಳಿಸಿದರು. ನಂತರ ಈ ಮೇಲೆ ಹೇಳಿದ ನಾವೆಲ್ಲರೂ ಖಾಸಗಿ ವಾಹನ ಸಂಖ್ಯೆ: ಕೆಎ–14/ಎಂ.9001 ರಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಗಸ್ತಿಗೆ ಹೋದೆವು. ಈ ರೀತಿ ನಾವು ಸುಂಕಸಾಳ ಹೈಲ್ಯಾಂಡ್ ಹೋಟೆಲ್ ವರೆಗೆ ಹೋದೆವು. ಪುನ: ತಿರುಗಿ ಬಂದು ಸುಂಕಸಾಳ ರಣಕಂಬದ ಹತ್ತಿರ ನಮ್ಮಲ್ಲಿದ್ದ ಮೂರು ಸಿಬ್ಬಂದಿಗಳನ್ನು ಅಲ್ಲಿ ಇಳಿಸಿದರು. ನಾನು ಹಾಗೂ ಇತರೇ ಸಿಬ್ಬಂದಿಗಳು ಖಾಸಗಿ ವಾಹನ ಸಮೇತ ಮಾಸ್ತಿಕಟ್ಟಾ ಸಮೀಪ ಹೊಸಕಂಬಿ ಓಣಿಗೆ ಬಂದೆವು. ಬಂದು ವಾಹನ ಶೋಧ ಕಾರ್ಯದಲ್ಲಿ ಸಿಬ್ಬಂದಿಯವರು ತೊಡಗಿದೆವು. ಮಾಹಿತಿ ಬಂದ ವಾಹನ ಬರದೇ ಇದ್ದ ಕಾರಣ ಬೆಳಗಿನ ಜಾವ ನಾವೆಲ್ಲರೂ ಅಗಸೂರಿಗೆ ಹೋದೆವು. ಅಗಸೂರಿನಲ್ಲಿ ಎನ್.ಹೆಚ್.–63 ರ ಬದಿಗೆ ಮಂಗಳೂರು ಹೋಟೆಲ ಇದ್ದು ಅದರ ಬದಿಯಲ್ಲಿ ಇಲಾಖೆಗೆ ಮಾಹಿತಿ ಬಂದ ವಾಹನ ಸಂಖ್ಯೆ: ಕೆಎ–30/251 ನಾಗೇಶ ಮಹಾಲಕ್ಷ್ಮಿ ಎಂಬ ಹೆಸರಿದ್ದ ಒಂದು ಟ್ರಕ್ಕು ನಿಂತಿತ್ತು. ಸದರಿ ಟ್ರಕ್ಕಿಗೆ ತಾಡಪತ್ತಿಯಿಂದ ಪೂರ್ತಿಯಾಗಿ ಮುಚ್ಚಲಾಗಿತ್ತು. ನಾನು ಹಾಗೂ ಇತರೇ ಸಿಬ್ಬಂದಿಗಳು ಹಾಗೂ ನಾನು ಸದರಿ ಟ್ರಕ್ಕನ್ನು ಪರೀಕ್ಷೆ ಮಾಡಿದೆವು. ಅದರಲ್ಲಿ ಸುಮಾರು 50 ಚೀಲ ಭತ್ತದ ಉಮ್ಮಿ ತುಂಬಿದ ಚೀಲಗಳು ಕಂಡು ಬಂದವು. ವಾಹನದಲ್ಲಿ ವಾಹನದ ಚಾಲಕನಾದ ಶ್ರೀ. ಗೋವಿಂದ ಬೇಡು ನಾಯ್ಕ ಇತರರು ಇದ್ದು ಇತನನ್ನು ಈ ಉಮ್ಮಿ ಚೀಲಗಳ ಬಗ್ಗೆ ಪ್ರಸ–1

ಮತ್ತು ಪ್ರಸ–2 ರವರು ವಿಚಾರಿಸಲಾಗಿ ಅದನ್ನು ಇಡಗುಂದಿ ಮಿಲ್ಲಿನಿಂದ ತಂದಿರುವದಾಗಿ ತಿಳಿಸಿದರು. ಅದಕ್ಕೂ ಮೊದಲು ಅಂಕೋಲಾದಿಂದ ಅದೇ ವಾಹನದಲ್ಲಿ ಕೆಂಪು ಚೀರೆ ಕಲ್ಲನ್ನು ಇಡಗುಂದಿಗೆ ಸಾಗಿಸಿರುವದಾಗಿ ತಿಳಿಸಿರುತ್ತಾನೆ. ಆದರೆ ವಾಹನ ಪರಿಶೀಲಿಸಲಾಗಿ, ಅದರಲ್ಲಿ ಕೆಂಪು ಕಲ್ಲು ತುಂಬಿದ ಬಗ್ಗೆ ಯಾವುದೇ ಕುರುಹುಗಳು ಕಂಡು ಬಾರದೇ ಇದ್ದದರಿಂದ ಹೆಚ್ಚಿನ ತನಿಖೆಗಾಗಿ ಸದರಿ ವಾಹನವನ್ನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾರವರ ಕಚೇರಿಗೆ ತರಲಾಯಿತು. ನಾವು ವಾಹನ ಪರೀಕ್ಷೆ ಮಾಡುವ ಕಾಲಕ್ಕೆ ವಾಹನದಲ್ಲಿ ಓರ್ವ ಮಂಜುನಾಥ ಗಣಪತಿ ನಾಯ್ಕ ಸಹ ಇದ್ದರು. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ರವರಾದ ಶ್ರೀ. ಪ್ರಕಾಶ ರವರು ಗೋವಿಂದ ಬೇಡು ನಾಯ್ಕ ಇತನ ಹತ್ತಿರ ಈ ಬಗ್ಗೆ ದೀರ್ಘ ವಿಚಾರಣೆ ನಡೆಸಿದ್ದು ಆಗ ಗೋವಿಂದ ಬೇಡು ನಾಯ್ಕ ಇತನು ತಾನು ಸದರಿ ವಾಹನದಲ್ಲಿ ಸಾಗವಾನಿ ತುಂಡುಗಳನ್ನು ತುಂಬಲು ಬಂದಿದ್ದು ನಿಜವೆಂದು ತಿಳಿಸಿರುತ್ತಾನೆ. ಹಾಗೂ ತಾನು ಸಂಜು ಪಾಂಡುರಂಗ ನಾಯ್ಕ, ಅಂಕೋಲಾ ಇವರ ಸಲಹೆ ಮೇರೆಗೆ ಹೆಬ್ಬುಳ ಹಾಗೂ ಸುಂಕಸಾಳ ಅರಣ್ಯ ಪ್ರದೇಶದಲ್ಲಿ ತಯಾರಿಸಿಟ್ಟ ತುಂಡುಗಳನ್ನು ತರಲು ಹೊರಟ್ಟಿದ್ದಾಗಿ ತಿಳಿಸಿದನು. ಮತ್ತು ಈ ರೀತಿ ತಾನು ಸಾಗವಾನಿ ತುಂಡುಗಳನ್ನು ತುಂಬಲು ಹೋಗಬೇಕಾದರೆ ತಾನು ಊಟ ಮಾಡಲು ನಿಂತ ದಾಬಾ ದ ಬಳಿ ಸಂಜು ಪಾಂಡುರಂಗ ನಾಯ್ಕ ಇತನು ಬಂದು ಅರಣ್ಯ ಸಿಬ್ಬಂದಿಗಳಿಗೆ ಸಂಶಯ ಬಂದ ಕಾರಣ ಸಾಗ ತುಂಡುಗಳನ್ನು ತುಂಬುವದು ಬೇಡ ಎಂದ ಕಾರಣ ತಾನು ಅಲ್ಲಿಯೇ ವಾಹನವನ್ನು ನಿಲ್ಲಿಸಿಟ್ಟ ಬಗ್ಗೆ ಹೇಳಿದನು. ಮತ್ತು ಭತ್ತದ ಉಮ್ಮಿಯ ಚೀಲಗಳನ್ನು ತೆಗೆದುಕೊಂಡು ಹೋಗಿ ಸಾಗವಾನಿ ತುಂಡುಗಳನ್ನು ತುಂಬಿ ಬರಲು ಯೋಜನೆ ಮಾಡಿದ ಬಗ್ಗೆ ತಿಳಿಸಿದನು. ಹಾಗೂ ಸದರಿ ಸಾಗವಾನಿ ತುಂಡುಗಳನ್ನು ಇಟ್ಟ ಸ್ಥಳವನ್ನು ತಾನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಗೋವಿಂದ ಹಾಗೂ ಮಂಜು ಮತ್ತು ಸಿಬ್ಬಂದಿಗಳ ಜೊತೆ ನಾನು ಸುಂಕಸಾಳಕ್ಕೆ ಹೋಗಿರುತ್ತೇನೆ. ಗೋವಿಂದ ಬೇಡು ನಾಯ್ಕ ಇತನು ನಮ್ಮನ್ನು ಸುಂಕಸಾಳ ಬ್ಲಾಕ್ 24 ಮತ್ತು 25ರಲ್ಲಿ ಕರೆದುಕೊಂಡು ಹೋಗಿ ದಾಸ್ತಾನು ಇಟ್ಟ ಸಾಗ ತುಂಡುಗಳನ್ನು ತೋರಿಸಿದ್ದು ಅದನ್ನು ನಾವು ಪರಿಶೀಲನೆ ಮಾಡಿದ್ದೆವು. ಪರಿಶೀಲಿಸಿ ನೋಡಲಾಗಿ ಅಲ್ಲಿ ಒಟ್ಟೂ 45 ಸಾಗವಾನಿ ತುಂಡುಗಳು ಇದ್ದು ಅದಕ್ಕೆ ಯಾವುದೇ ಇಲಾಖಾ ಛಪ್ಪಾ ವಗೈರೆ ಇರಲಿಲ್ಲ. ಅದನ್ನು ಅಳತೆ ಮಾಡಲಾಗಿ ಒಟ್ಟೂ 3.222 ಘ.ಮೀ. ಇದ್ದು ಪ್ರತಿಯೊಂದು ತುಂಡುಗಳಿಗೆ ನಂಬರನ್ನು ಹಾಗಿ ಗುನ್ನಾ ಛಪ್ಪಾವನ್ನು ಅರಣ್ಯ ಸಿಬ್ಬಂದಿಯವರು ಹಾಕಿದರು. ಸಿಬ್ಬಂದಿಗಳು ಸದರ ಸಾಗವಾನಿ ತುಂಡು ಇದ್ದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಸಾಗ ತುಂಡುಗಳನ್ನು ಜಪ್ತಪಡಿಸಿಕೊಂಡರು. ನಂತರ ಆರೋಪಿತರು ಹಾಗೂ ಜಪ್ತಪಡಿಸಿದ ಸಾಗವಾನಿ ತುಂಡುಗಳನ್ನು ಖಾಸಗಿ ವಾಹನದಲ್ಲಿ ತುಂಬಿಕೊಂಡು ಮರಳಿ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರ ಕಚೇರಿಗೆ ಬಂದು ನಮ್ಮ ಪಂಚನಾಮೆಯನ್ನು ಮುಂದುವರಿಸಿ ಕಚೇರಿ ಎದುರಗಡೆಯಿದ್ದ ವಾಹನ ಸಂಖ್ಯೆ: ಕೆಎ–30/251 ಟ್ರಕ್ಕನ್ನು ಜಪ್ತಪಡಿಸಿಕೊಂಡರು. ಆರೋಪಿತರು ಸದರಿ ವಾಹನದ ಮುಖಾಂತರ ಜಪ್ತಪಡಿಸಿಕೊಂಡ ಸಾಗವಾನಿ ತುಂಡುಗಳನ್ನು ಅನಧಿಕೃತವಾಗಿ ಸಾಗಾಟ ಮಾಡುವ ಉದ್ದೇಶ ಹೊಂದಿದ್ದರಿಂದ ಸಿಬ್ಬಂದಿಗಳು ಸದರಿ ವಾಹನವನ್ನು ಪಂಚನಾಮೆಯೊಂದಿಗೆ ಜಪ್ತಪಡಿಸಿಕೊಂಡಿರುತ್ತಾರೆ. ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಈ ಬಗ್ಗೆ ಗೋವಿಂದ ಬೇಡು ನಾಯ್ಕ ಇತನ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತಾರೆ. ಪಂಚನಾಮೆ ಹಾಗೂ ಸಹಿಯನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ ಅದನ್ನು ಈಗಾಗಲೇ ನಿ.ಪಿ.–1 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿ.ಪಿ–1ಸಿ ಎಂದು ಗುರುತಿಸಲಾಯಿತು. ನಾವು ಜಪ್ತಪಡಿಸಿಕೊಂಡ ಟ್ರಕ ನಂ ಕೆಎ–30/251ನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಟ್ರಕ್ಕಿನ ಛಾಯಾ ಚಿತ್ರ ನೋಡಿ ಗುರುತಿಸಿದ್ದು ಅದನ್ನು ನಿ.ಪಿ–2 ಮತ್ತು 3 ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಟ್ರಕ್ಕನ್ನು ಈಗ ಮಾನ್ಯ ನ್ಯಾಯಾಲಯದ ಆವರಣದಲ್ಲಿ ನೋಡುತ್ತಿದ್ದು ಅದನ್ನು ಮು.ಮಾ.–1 ಎಂದು ಗುರುತಿಸಲಾಗಿದೆ.. ನಂತರ ಈ ಬಗ್ಗೆ ಪ್ರ.ಸ–1 ರವರು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಸಾರ್ವಜನಿಕರು ನಿ.ಪಿ–1 ಪಂಚನಾಮೆ ಕಾಲಕ್ಕೆ ಯಾರೂ ಬರದೇ ಇದ್ದ ಕಾರಣ ನಾನು ಪಂಚನಾಗಿ ನಿ.ಪಿ–1ಕ್ಕೆ ಸಹಿ ಮಾಡಿರುತ್ತೇನೆ. ನಂತರ ಮುಂದಿನ ಕ್ರಮಕ್ಕಾಗಿ ಆರೋಪಿತರನ್ನು ವಲಯ ಅರಣ್ಯಾಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ದಿನಾಂಕ: 21–2–2004 ರಂದು ಸುಂಕಸಾಳದಲ್ಲಿ ನಾನು ಹಾಗೂ ಇನ್ನೊಬ್ಬ ವಾಚಮನ್ ಫಿಲಿಪ ಫರ್ನಾಂಡಿಸ್ ಜಪ್ತಪಡಿಸಿದ ಸಾಗ ತುಂಡುಗಳ ಬುಡಚೆಯನ್ನು ಹುಡುಕಿದೆವು. ಸುಂಕಸಾಳ ಬ್ಲಾಕ್ 24–25 ರಲ್ಲಿ 14 ಬುಡಚೆಗಳು ಸಿಕ್ಕಿದ್ದು ಈ ಬಗ್ಗೆ ಪಂಚನಾಮೆ ಮಾಡಲಾಗಿದೆ. ಅರ್ಜಿದಾರನಾದ ಆರೋಪಿ ವಾಹನ ಚಾಲಕ ಗೋವಿಂದ ಬೇಡು ನಾಯ್ಕ ಇತನನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಅರ್ಜಿದಾರರು ಗೈರು ಇರುತ್ತಾರೆ) ಎಂದು ಹೇಳಿಕೆ ನೀಡಿರುತ್ತಾರೆ.

ಪಾಟೀ ಸವಾಲು ಅರ್ಜಿದಾರ ಪರ ವಕೀಲರಿಂದ:

ಅರ್ಜಿದಾರರು ಹಾಗೂ ಆತನ ವಕೀಲರನ್ನು ಕರೆಯಿಸಲಾಯಿತು. ಅರ್ಜಿದಾರರು ಹಾಗೂ ಅವರ ವಕೀಲರು ಹಾಜರು ಇರುವುದಿಲ್ಲ. ಕಾರಣ, ಪಾಟೀ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

ಪಿಡಬ್ಲ್ಯು–4 ಶ್ರೀ. ಕೆ.ಜಿ. ಪ್ರಕಾಶ, ವಲಯ ಅರಣ್ಯಾಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ನಾನು ದಿನಾಂಕ: 26–05–2003 ರಿಂದ 29–05–2006 ರ ವರೆಗೆ ನಾನು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಎಂತಾ ಕರ್ತವ್ಯ ನಿರ್ವಹಿಸಿದ್ದು ಇರುತ್ತದೆ. ದಿನಾಂಕ: 19–02–2004 ರಂದು ರಾತ್ರಿ ಸಮಯದಲ್ಲಿ ನಾನು ಗಸ್ತು ತಿರುಗುತ್ತಿದ್ದಾಗ ನನಗೆ ಒಂದು ಲಾರಿಯಲ್ಲಿ ಸಾಗವಾನಿ ತುಂಡುಗಳನ್ನು ಅಕ್ರಮವಾಗಿ ಸಾಗಟಾ ಮಾಡುತ್ತಿದ್ದ ಬಗ್ಗೆ ನನಗೆ ಮಾಹಿತಿ ಬಂದಿತು. ಕಾರಣ ಈ ವಿಷಯವನ್ನು ನಾನು ಗಸ್ತು ಕರ್ತವ್ಯದಲ್ಲಿದ್ದ ನನ್ನ ಸಿಬ್ಬಂದಿಗಳಾದ ಶ್ರೀ. ಕುಸ್ಲಪ್ಪ ನಾಯ್ಕ ಪಿಡ್ಲು–1, ಶ್ರೀ. ಹೆಚ್.ವಿ. ನಾಯ್ಕ ಹಾಗೂ ವಾಮನ ಸುಬ್ರಾಯ ನಾಯ್ಕ ಪಿಡಬ್ಲ್ಯು–3 ಹಾಗೂ ಎನ್.ಬಿ. ತಾಂಡೇಲ ಇವರಿಗೆ ಈ ವಿಷಯವನ್ನು ತಿಳಿಸಿ ಈ ಬಗ್ಗೆ ಸೂಕ್ತ ಗಸ್ತು ಕೈಕೊಂಡು ಕ್ರಮ ಕೈಕೊಳ್ಳಲು ತಿಳಿಸಿದೆನು. ಅದರಂತೆ ಅವರು ಎನ್.ಹೆಚ್–63ರ ಅಗಸೂರಿನಲ್ಲಿ ಮಂಗಳೂರು ಹೋಟೆಲ್ ಹತ್ತಿರ ವಾಹನ ಸಂಖ್ಯೆ: ಕೆಎ–30/251ನ್ನು ಪಂಚನಾಮೆಯಡಿ ಜಪ್ತಮಾಡಿಕೊಂಡು ಹಾಗೂ ಅದರಲ್ಲಿದ್ದ ಸಾಗವಾನಿ ತುಂಡುಗಳನ್ನು ಜಪ್ತಪಡಿಸಿಕೊಂಡು ದಿನಾಂಕ: 20–02–2004 ರಂದು ಸದ್ರಿ ಸಿಬ್ಬಂದಿಗಳು ಆರೋಪಿತರಾದ ಗೋವಿಂದ ಬೇಡು ನಾಯ್ಕ ಹಾಗೂ ಮಂಜುನಾಥ ಗಣಪತಿ ನಾಯ್ಕ ಮತ್ತು ಒಂದು ವಾಹನ ಸಂಖ್ಯೆ: ಕೆಎ–30/251 ನ್ನು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ನನ್ನ ಸಮಕ್ಷಮ ಹಾಜರುಪಡಿಸದಂತ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಇರುತ್ತಾರೆ. ನಾನು ಸದ್ರಿ ಆರೋಪಿತರನ್ನು ವಿಚಾರಣೆಗೆ ಒಳಪಡಿಸಿದೆನು. ಹಾಗೂ ಆತ ನನ್ನ ಸಮಕ್ಷಮ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ಹೇಳಿಕೆಯನ್ನು ನೀಡಿರುತ್ತಾನೆ. ಪಂಚನಾಮೆಯಡಿ ಜಪ್ತಪಡಿಸಿಕೊಂಡಂತಹ ವಾಹನ ಹಾಗೂ ಸಾಗವಾನಿ ತುಂಡುಗಳ ಬಗ್ಗೆ ಜಪ್ತ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಜಪ್ತ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ–5 ಎಂದು ಪ್ರ.ಸ–1 ಇವರ ಮುಖಾಂತರ ನಿಶಾನೆಗೊಳಿಸಿದ್ದು ಸಾಕ್ಷಿ ಸಹಿಯನ್ನು ನಿ.ಪಿ–5ಎ ಎಂದು ಗುರುತಿಸಲಾಯಿತು. ಸಾಕ್ಷಿ ಜಪ್ತ ಪಡಿಸಿಕೊಂಡ ವಾಹನ ಟ್ರಕ್ ನಂ ಕೆಎ–30/251ನೇದರ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ–2 ಮತ್ತು 3 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಆವರಣದಲ್ಲಿರುವ ಟ್ರಕ್ಕನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿದೆ. ನಂತರದಲ್ಲಿ ಪ್ರ.ಸ–1 ರವರು ತನಿಖಾ ವರದಿಯನ್ನು ನನಗೆ ಸಲ್ಲಿಸಿರುತ್ತಾರೆ. ಅವರ ತನಿಖಾ ವರದಿಯನ್ನು ಆಧರಿಸಿ

ನಾನು ತನಿಖೆಯನ್ನು ಕೈಕೊಂಡು ಅದನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಹಾಗೂ ಜಫ್ತಾದ ವಾಹನದ ಬಗ್ಗೆ ಮುಂದಿನ ಕ್ರಮಕ್ಕಾಗಿ ಅಧಿಕಾರಿಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರ ನ್ಯಾಯಾಲಯಕ್ಕೆ ವರದಿಯೊಂದಿಗೆ ನಿವೇದಿಸಿಕೊಂಡಿರುತ್ತೇನೆ. ಜಫ್ತಾದ ವಾಹನವನ್ನು ಅರಣ್ಯ ಅಪರಾಧ ಪ್ರಕರಣಕ್ಕೆ ಉಪಯೋಗಿಸಿರುವದರಿಂದ ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೇಳಿಕೊಳ್ಳುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ.

ಪಾಟೀ ಸವಾಲು ಶ್ರೀ. ಚರಣ್ ಡಿ. ನಾಯ್ಕ ವಕೀಲರಿಂದ :

ಬಾತ್ಮಿಯು ನನಗೆ ದಿನಾಂಕ: 19–02–2004 ರ 10 ಗಂಟೆಗೆ ಬಂದಿರುತ್ತದೆ. ಮರಕಡಿದ ಸ್ಥಳದಿಂದ ವಾಹನವನ್ನು ಜಫ್ತಮಾಡಿದ ಸ್ಥಳಕ್ಕೆ ವಾಹನದಲ್ಲಿ ಬರಬೇಕಾದರೆ ಸುಮಾರು ಅರ್ಧ ಗಂಟೆ ಸಮಯ ಬೇಕಾಗುತ್ತದೆ. ಜಫ್ತಪಡಿಸಿದ ತುಂಡುಗಳನ್ನು ಸಾಗವಾನಿ ತುಂಡುಗಳೆಂದು ಗುರುತಿಸಲು ನನಗೆ ನನ್ನ ತರಬೇತಿ ಅವಧಿಯಲ್ಲಿ ತರಬೇತಿ ನೀಡಿರುತ್ತಾರೆ ಆ ಮೇರೆಗೆ ಅವುಗಳನ್ನು ನಾನು ಸಾಗವಾನಿ ತುಂಡುಗಳೆಂದು ಗುರುತಿಸಿದ್ದೇನೆ. ಜಫ್ತಪಡಿಸಿದ ತುಂಡಗಳನ್ನು ಸಾಗವಾನಿ ತುಂಡುಗಳೆಂದು ಗುರುತಿಸಲು ನಾನು ಯಾವುದೇ ರಾಸಾಯನಿಕ ಪರೀಕ್ಷೆಗೆ ಒಳಪಡಿಸಿರುವದಿಲ್ಲ. ಕಾರಣ, ನಾವೇ ಸ್ವತ: ಅದನ್ನು ಗುರುತಿಸಲು ತರಬೇತಿಯನ್ನು ಪಡೆದುಕೊಂಡಿರುತ್ತೇವೆ. ನಾವು ಪಂಚನಾಮೆಯಡಿ ಜಫ್ತಪಡಿಸಿಕೊಂಡ ಕಟ್ಟಿಗೆ ತುಂಡುಗಳು ಸಾಗ ತುಂಡಗಳಲ್ಲಾ ಎಂದರೆ ಸರಿಯಲ್ಲ. ಅರ್ಜಿದಾರ ಆರೋಪಿತರು ಯಾವುದೇ ಸಾಗ ತುಂಡುಗಳನ್ನು ಕಳ್ಳ ಸಾಗಾಣಿಕೆಯಿಂದ ತಮ್ಮ ವಾಹನದಲ್ಲಿ ಸಾಗಾಟ ಮಾಡುತ್ತಿರಲ್ಲಿಲ್ಲ ಎಂದರೆ ಸರಿಯಲ್ಲ. ಚಹಾ ಕುಡಿಯಲು ಮಂಗಳೂರು ಹೋಟೆಲ್ ಬಳಿ ನಿಲ್ಲಿಸಿದ್ದ ಅರ್ಜಿದಾರರ ವಾಹನವನ್ನು ಅರಣ್ಯ ಇಲಾಖೆಯ ಸಿಬ್ಬಂದಿಗಳು ಜಫ್ತಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಹಾಗೂ ಅರ್ಜಿದಾರ ಆರೋಪಿತನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನು ನನ್ನ ಸಮಕ್ಷಮ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಸಿಬ್ಬಂದಿಗಳು ನೀಡಿದಂತಹ ಸುಳ್ಳು ದೂರಿಗೆ ಅನುಸರಿಸಿ ನಾನು ತನಿಖೆ ಕೈಕೊಂಡು ಇಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂದು ಹೇಳಿಕೆ ನೀಡಿರುತ್ತಾರೆ.

ಅಂಶ ನಂ. (ಆ):

ದಿನಾಂಕ: 19–02–2004 ರಂದು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರಿಗೆ ನಾಗೇಶ–ಮಹಾಲಕ್ಷ್ಮಿ ಎಂಬ ವಾಹನದಲ್ಲಿ ಕಳ್ಳಸಾಗಾಣಿಕೆಯಿಂದ ಕಟ್ಟಿಗೆ ಸಾಗಿಸುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಗಳಿಗೆ ರಾತ್ರಿ ಗಸ್ತು ಮಾಡಲು ಸೂಚಿಸಿದಂತೆ ಸಿಬ್ಬಂದಿಗಳಾದ ಶಾಖಾ ವನಪಾಲಕ ಮಾಸ್ತಿಕಟ್ಟಾ, ಅರಣ್ಯ ರಕ್ಷಕ ಅಗಸೂರು, ಶಾಖಾ ವನಪಾಲಕ ಸುಂಕಸಾಳ, ಅರಣ್ಯರಕ್ಷಕ ಸುಂಕಸಾಳ ಇವರು ಖಾಸಗಿ ವಾಹನ ಸಂಖ್ಯೆ: ಕೆಎ–14/ಎಂ.9001ನೇದರಲ್ಲಿ ಗಸ್ತು ತಿರುಗುತ್ತಾ ಹೈಲ್ಯಾಂಡ್, ಸುಂಕಸಾಳ, ಹೊಸಕಂಬಿ ಪ್ರದೇಶದಲ್ಲಿ ಪೆಟ್ರೋಲಿಂಗ್ ಮಾಡುತ್ತಾ ಪುನ: ತಿರುಗಿ ಬಂದು ಸುಂಕಸಾಳ ಶಾಖಾ ಹದ್ದಿಯ ಬ್ಲಾಕ್ 24–25ರ ಕೋಟೆಪಾಲ ರೋಡಿನಲ್ಲಿ ರಣಕಂಬದ ಹತ್ತಿರ ಗಸ್ತುನಲ್ಲಿರುವಾಗ ಸುಮಾರು ಬೆಳಗ್ಗಿನ ಜಾವ 5.30 ಘಂಟೆಗೆ ಎನ್.ಹೆಚ್–63ರ ಮಂಗಳೂರು ಹೋಟೆಲ್ ಬದಿಯಲ್ಲಿ ಪೂರ್ಣ ತಾಡಪತ್ರೆ ಕಟ್ಟಿದ ಕೆಎ–30/251 ವಾಹನ ನಿಂತಿರುವದನ್ನು ಗಮನಿಸಿ ಅಲ್ಲಿಗೆ ಹೋಗಿ ವಾಹನ ಚಾಲಕರನ್ನು ವಿಚಾರಿಸಲಾಗಿ ಅವರು ಅಸ್ಪಷ್ಟ ಉತ್ತರ ನೀಡಿರುವದರಿಂದ ಹೆಚ್ಚಿನ ವಿಚಾರಣೆಗಾಗಿ ಸದರ ವಾಹನವನ್ನು ಚಾಲಕನ ಸಹಾಯದಿಂದ ಮಾಸ್ತಿಕಟ್ಟಾ ವಲಯ ಕಚೇರಿಗೆ ಕರೆತಂದು ನಂತರ ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಸುದೀರ್ಘವಾಗಿ ವಾಹನ ಚಾಲಕನನ್ನು ವಿಚಾರಿಸಲಾಗಿ ಆಗ ವಾಹನ ಚಾಲಕ/ಮಾಲೀಕನಾದ ಗೋವಿಂದ ಬೇಡು ನಾಯ್ಕ ಇತನು ತಾನು ಸದರ ವಾಹನದಲ್ಲಿ ಸಾಗವಾನಿ ತುಂಡುಗಳನ್ನು ತುಂಬಲು ಬಂದಿದ್ದು ನಿಜವಿರುವದಾಗಿ ಹಾಗೂ ತಾನು ಇದನು ಸಂಜು ಪಾಂಡುರಂಗ ನಾಯ್ಕ, ಸಾ: ಅಂಕೋಲಾ ಇವರ ಸಲಹೆ ಮೇರೆಗೆ ಹೆಬ್ಬುಳ ಹಾಗೂ ಸುಂಕಸಾಳ ಅರಣ್ಯ ಪ್ರದೇಶದಲ್ಲಿ ತಯಾರಿಸಲ್ಪಟ್ಟ ತುಂಡುಗಳನ್ನು ತರಲು ಹೊರಟಿರುವದಾಗಿ ಹೇಳಿರುತ್ತಾರೆ.

ಸದರಿ ಸಾಗವಾನಿ ತುಂಡುಗಳು ಇದ್ದ ಸ್ಥಳವನ್ನು ಸಹ ತೋರಿಸುವದಾಗಿ ತಿಳಿಸಿದ ಮೇರೆಗೆ ಅವನ ಜೊತೆ ಸಿಬ್ಬಂದಿಗಳು/ಸಾಕ್ಷಿದಾರರು ಸದರಿ ಸಾಗವಾನಿ ತುಂಡುಗಳನ್ನು ದಾಸ್ತಾನು ಇಟ್ಟ ಸ್ಥಳವಾದ ಸುಂಕಸಾಳ ಬ್ಲಾಕ್–24–25ರಲ್ಲಿ ಹೋಗಿ ಪರಿಶೀಲಿಸಿ ನೋಡಲಾಗಿ ಅಲ್ಲಲ್ಲಿ ರಸ್ತೆ ಬದಿಗೆ ಚಿಪಡದಲ್ಲಿ ತುಂಡುಗಳು ದಾಸ್ತಾನು ಇಟ್ಟಿದ್ದು ಕಂಡು ಬಂದಿತು. ಸದರಿ ತುಂಡುಗಳು ತಾಜಾ ಹಸಿ ತುಂಡುಗಳು ಇದ್ದು ಯಾವುದೇ ನಂಬರ ವಗ್ಯೆರೆ ಇರಲಿಲ್ಲ ಇವುಗಳು ಅನಧಿಕೃತ ತುಂಡುಗಳು ಎಂದು ಖಾತ್ರಿ ಮಾಡಿಕೊಂಡು ಪಂಚನಾಮೆಯಿಂದ ಅವುಗಳ ಅಳತೆಯನ್ನು ಮಾಡಲಾಗಿ ಅವು ಸಾಗ ಜಾತಿಯ 45 ತುಂಡುಗಳು 3.222 ಘ.ಮೀ. ಇದ್ದದ್ದು ಕಂಡು ಬಂದು ಅದಕ್ಕೆ ಟೀ ನಿಶಾನೆ ಚಪ್ಪಾ ಹೊಡೆದು ಅದನ್ನು ಇಲಾಖಾ ತಾಬಾ ಪಡೆದುಕೊಳ್ಳಲಾಯಿತು. ಸದರಿ ವಾಹನದ ಚಾಲಕರಾದ ಶ್ರೀ. ಗೋವಿಂದ ಬೇಡು ನಾಯ್ಕ, ಸಾ: ವಂದಿಗೆ, ಅಂಕೋಲಾ ಇವರು ಸ್ವತ: ಮಾಲೀಕರಾಗಿದ್ದು ಮತ್ತು ಸದರಿ ವಾಹನವು ಗುನ್ನೆಯಲ್ಲಿ ಬಳಸಿದ ಬಗ್ಗೆ ಅದನ್ನು (ನಿ.ಪಿ– 1ರಿಂದ ನಿ.ಪಿ–5) ದಾಖಲಾಗಿದೆ. ಇದೂ ಅಲ್ಲದೇ ಸರ್ಕಾರ ಪರ ಸಾಕ್ಷಿ ವಿಚಾರಣೆಯಲ್ಲಿ **ಪಿಡಬ್ಲ್ಯು–1 ಪಿಡಬ್ಲ್ಯು–4** ಇವರು ನೀಡಿದ ಹೇಳಿಕೆಯು ಕೂಡ ಸದರ ಗೂಡ್ಸ ರಿಕ್ಷಾ ವಾಹನ ಮತ್ತು ಸಾಗ ತುಂಡುಗಳನ್ನು ಅರಣ್ಯ ಕಳ್ಳ ಸಾಗಾಣಿಕೆಯ ಅಪರಾಧದಲ್ಲಿ ಬಳಸಿಕೊಂಡಿದ್ದು ಖಚಿತಪಡಿಸುತ್ತದೆ ಹಾಗೂ ಈ ಅಂಶವು ಪುರಾವೆ ಆಗಿರುತ್ತದೆ.

ಅಂಶ ನಂ. (ಇ):

ದಿನಾಂಕ: 19–02–2004 ರಂದು ವಲಯ ಅರಣ್ಯಾಧಿಕಾರಿ, ಮಾಸ್ತಿಕಟ್ಟಾ ಇವರು ಈ ನ್ಯಾಯಾಲಯದ ಎದುರು ಹಾಜರುಪಡಿಸಿದ ವರದಿ ಹಾಗೂ ಅದರೊಂದಿಗೆ ಸಲ್ಲಿಸಿದ ಪ್ರಥಮ ಮಾಹಿತಿ ವರದಿ ಸಂಖ್ಯೆ: 7/2003–04, ದಿನಾಂಕ: 20–02–2004 ಪಂಚನಾಮೆ, ಸೀಜರ್ ರಿಪೋರ್ಟ, ವಿಚಾರಣಾ ವರದಿ ಹಾಗೂ ವಾಹನದ ಛಾಯಾ ಚಿತ್ರ **(ನಿ.ಪಿ–1 ರಿಂದ ನಿ.ಪಿ–5)** ಪರಿಶೀಲಿಸಲಾಗಿದೆ. ಆರೋಪಿತ ಅರ್ಜಿದಾರನು ತನ್ನ ಸ್ವಂತ ಟಾಟಾ ಟ್ರಕ್ ವಾಹನ ಸಂಖ್ಯೆ: KA-30/251 ನೇದರಲ್ಲಿ ಈ ಹಿಂದೆ ನಾಲ್ಕುಬಾರಿ ಕಳ್ಳಸಾಗಾಣಿಕೆಯಿಂದ ಕಟ್ಟಿಗೆಯನ್ನು ಸಾಗಿಸಿರುವ ಬಗ್ಗೆ ವಿಚಾರಣೆ ಕಾಲಕ್ಕೆ ಹೇಳಿರುತ್ತಾರೆ. ಮತ್ತು ಈ ಗುನ್ನೆಗೆ ಸಂಬಂಧಪಟ್ಟಂತೆ ಸದರಿ ವಾಹನದಲ್ಲಿಯೇ ಸಾಗಿಸಲು ಸುಂಕಸಾಳ ಬ್ಲಾಕ್–24–25ರಲ್ಲಿ ಸಾಗ ತುಂಡುಗಳು 45=3.222 ಘ.ಮೀನ್ನು ತಯಾರಿಸಿ ಇಟ್ಟಿರುವದನ್ನು ತನಿಖಾಧಿಕಾರಿಗಳ ಸಮಕ್ಷಮ ಒಪ್ಪಿಕೊಂಡಿರುತ್ತಾರೆ. ಈ ರೀತಿ ಅರಣ್ಯಗುನ್ನೆಯಲ್ಲಿ ಭಾಗಿಯಾಗಿರುವದು ನಿಜವಿರುವದಾಗಿ ಒಪ್ಪಿಕೊಂಡಿದ್ದಾನೆ. ಆದರೆ, ಸದರಿ ಅರ್ಜಿದಾರನಾಗಲಿ ಅಥವಾ ಅವರ ಪರ ವಕಾಲತ್‌ವಹಿಸಿದ ನ್ಯಾಯವಾದಿಗಳಾಗಲಿ ತಮ್ಮ ಹೇಳಿಕೆಯನ್ನು ಸಮರ್ಥಿಸಬಹುದಾದಂತಹ ಯಾವುದೇ ದಾಖಲೆ/ಸಾಕ್ಷಿ ಪುರಾವೆಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ ಫಿರ್ಯಾದುದಾರರು ಒದಗಿಸಿದ ದಾಖಲೆಗಳು ಅಂದರೆ ಪ್ರಥಮ ಮಾಹಿತಿ ವರದಿ, ಪಂಚನಾಮೆ ಹಾಗೂ ಸಾಕ್ಷಿ ಹೇಳಿಕೆಗಳನ್ನು ಅಧಿಕೃತವೆಂದು ಪರಿಗಣಿಸಲಾಗಿದೆ.

ಪ್ರಸ್ತುತ ಪ್ರಕರಣದಲ್ಲಿ ವಾಹನ ಮಾಲೀಕರೇ ಸ್ವತ: ತಮ್ಮ ಸ್ವಂತ ಟಾಟಾ ಟ್ರಕ್ ವಾಹನ ಸಂಖ್ಯೆ: KA-30/521 ನೇದನ್ನು ಕಳ್ಳಸಾಗಾಣಿಕೆ ಬಳಸಿಕೊಂಡಿರುವದು ಮತ್ತು ಇಲ್ಲಿ ಅಪರಾಧಿಯೇ ಸ್ವತ: ಚಾಲಕ ಹಾಗೂ ವಾಹನದ ಮಾಲೀಕ ಮತ್ತು ಅರ್ಜಿದಾರ ಆಗಿದ್ದಾರೆ ಎನ್ನುವದು ದೃಢಪಟ್ಟಿದೆ.

ಅಂಶ ನಂ. (ಈ):

ಈ ಪ್ರಕರಣದಲ್ಲಿ ಮಾನ್ಯ ಕಾನೂನು ಅಧಿಕಾರಿಗಳು (ಕಿ) ರವರು ಈ ಪ್ರಕರಣದ ಗುನ್ನೆ ದಾಖಲಿಸಿದ ಹಾಗೂ ಸಾಕ್ಷಿಗಳ ವಿಚಾರಣೆಯಿಂದ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಗಿದ್ದು, ಮುಂದುವರಿದು ಕಾನೂನು ಅಧಿಕಾರಿಗಳು (ಕಿ) ರವರು ತಮ್ಮ ವಾದ ಪುಷ್ಟೀಕರಿಸಲು ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪು 2009 (I) Crime Page 25 ಇದನ್ನು ನೀಡಿರುತ್ತಾರೆ ಮತ್ತು ಕಾನೂನು ಅಧಿಕಾರಿಗಳು (ಕಿ) ರವರು ಹಾಜರುಪಡಿಸಿದ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪು ನೋಡಲಾಗಿ ಯಾವುದೇ ವಾಹನವು ಅರಣ್ಯ ಉತ್ಪನ್ನಗಳ ಅನಧಿಕೃತ ಸಾಗಾಟ ಮಾಡಲು ಬಳಸಿದ್ದಲ್ಲಿ ಅದು Deforestation ಆಗಲು ಕಾರಣವಾಗುತ್ತದೆ ಎಂದು ಭಾವಿಸಬೇಕು ಹಾಗೂ ಇದು ನೈಸರ್ಗಿಕ ಅಸಮತೋಲನಕ್ಕೆ ಕಾರಣವಾಗುತ್ತದೆ. ಅರಣ್ಯ ಕಾಪಾಡುವದು ಇಲಾಖೆಯ ಕರ್ತವ್ಯವಾಗಿದ್ದು ಅನಧಿಕೃತವಾಗಿ ವಾಹನವನ್ನು ಮರಗಳ ಸಾಗಾಟಕ್ಕೆ ಬಳಸಿದರೆ ಬಹಿರಂಗ ಹರಾಜು ಮಾಡಬಹುದೆಂದು ಆದೇಶ ಮಾಡಿದ್ದು ಇರುತ್ತದೆ. ಆದ್ದರಿಂದ ಪರ ಹಾಗೂ ಅರ್ಜಿದಾರರ ಪರ ದಾಖಲೆಗಳನ್ನು, ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಟಾಟಾ ಟ್ರಕ್ ವಾಹನ ಸಂಖ್ಯೆ: KA-30/251 ಇದು ದಿನಾಂಕ: 19–02–2004 ರಂದು ಪ್ರಥಮ ಮಾಹಿತಿ ಸಂಖ್ಯೆ: 7/2003–04, ದಿನಾಂಕ: 20–02–2004 ರನ್ವಯ ದಾಖಲಾದ ಗುನ್ನೆಯಲ್ಲಿ ಅನಧಿಕೃತವಾಗಿ ಸಾಗ ಕೊರೆದ ನಗಗಳು 31=0.217 ಘ.ಮೀ. ಕಳ್ಳ ಸಾಗಾಣಿಕೆ ಮಾಡುವಲ್ಲಿ ತೊಡಗಿಸಿಕೊಂಡಿದ್ದು ದೃಢಪಟ್ಟಿರುವದರಿಂದ ಕರ್ನಾಟಕ ಅರಣ್ಯ ಕಾಯಿದೆ 71(ಎ)ರಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಬೇಕೆನ್ನುವ ಅಂಶವು ಮನದಟ್ಟಾಗಿದೆ.

ಆದ್ದರಿಂದ ಈ ಕೆಳಗಿನಂತೆ ಆದೇಶ:

ಆದೇಶ

ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಪರಿಗಣಿಸಿ ಟಿ.ಹೀರಾಲಾಲ್, ಭಾ.ಅ.ಸೇ., ಅಧಿಕಾರಿಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಆದ ನಾನು ಈ ಮೂಲಕ ಆದೇಶಿಸುವದೇನೆಂದರೆ ಈ ಗುನ್ನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಅರಣ್ಯ ಕಾಯಿದೆ 1963ರ ಅನುಚ್ಛೇದ 71 (ಎ) ಈ ತಾರೀಖಿನ ವರೆಗೆ ಆದ ತಿದ್ದುಪಡಿ ಪ್ರಕಾರ ಟಾಟಾ ಟ್ರಕ್ ವಾಹನ ಸಂಖ್ಯೆ: KA-30/251 ಮತ್ತು ಅದರಲ್ಲಿದ್ದ ಸಾಗ ನಗಗಳು 45=3.222 ಘ.ಮೀ. ನ್ನು ಈ ಮೂಲಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ.

ವಾಹನದ ವಿವರ:

1)	ನೋಂದಣಿ ಸಂಖ್ಯೆ	:	KA-30/251
2)	ಇಂಜಿನ್ ನಂಬರ	:	692 D01977383
3)	ಚಾಸಿ ನಂಬರ	:	364073521591 RTO, Karwar ಚಾಸಿಸ್ ನಂಬರ ಬದಲಾವಣೆ ದಿನಾಂಕ: 1–2–2002 ರಿಂದ KA-30/1165 ಆಗಿರುತ್ತದೆ.
4)	ವಾಹನದ ಮಾದರಿ	:	ಟಾಟಾ ಟ್ರಕ್ (ನಾಲ್ಕು ಗಾಲಿ)

ಈ ಆದೇಶವನ್ನು ಹೊರಡಿಸಿದ 30 ದಿನಗಳ ಅವಧಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸದೇ ಇದ್ದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ. ಈ ಆದೇಶವನ್ನು ಈ ಹೊತ್ತಿನ ದಿನಾಂಕ: 24–07–2015 ರಂದು ಈ ನ್ಯಾಯಲಯದಲ್ಲಿ ಮೊಹರು ಹಾಕಿ ನನ್ನ ಸಹಿಯೊಂದಿಗೆ ಬಿಡುಗಡೆ ಮಾಡಿರುತ್ತೇನೆ.

ಟಿ. ಹೀರಾಲಾಲ್, ಭಾ.ಅ.ಸೇ.
ಅಧಿಕಾರಿಯುತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾರವಾರ ವಿಭಾಗ, ಕಾರವಾರ.

PR. 73
SC. 1

ಸಹಕಾರ ಇಲಾಖೆ

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1 ಆಲಿಅಸ್ಕರ್ ರಸ್ತೆ, ಬೆಂಗಳೂರು–560052

ವಿಷಯ : ಸ್ಥಗಿತಗೊಂಡಿರುವ ಮಂಡ್ಯ ಜಿಲ್ಲಾ ಸಾರಿಗೆ ಮತ್ತು ಪ್ರವಾಸೋದ್ಯಮ ಸಹಕಾರ ಸಂಘ ನಿ., ಮಂಡ್ಯ ಈ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ.

ಉಲ್ಲೇಖ : ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪತ್ರದ ಸಂಖ್ಯೆ:ಡಿಆರ್‌ವೈ/ಎ14/ಸಮಾಪನೆ/2014–15, ದಿ:16.06.2014 ಹಾಗೂ 75/2015–16, ದಿ:13.10.2015.

ಪ್ರಸ್ತಾವನೆ:

ಸ್ಥಗಿತಗೊಂಡಿರುವ ಮಂಡ್ಯ ಜಿಲ್ಲಾ ಸಾರಿಗೆ ಮತ್ತು ಪ್ರವಾಸೋದ್ಯಮ ಸಹಕಾರ ಸಂಘ ನಿ., ಮಂಡ್ಯ ಈ ಸಂಘವು ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು, ಇವರ ಆದೇಶದ ಸಂಖ್ಯೆ: ಜೆಆರ್‌ಎಂ/ಬಿ2/ಎಡಿಎಂ/ಹೆಚ್‌ಓಟಿ/31429/2005–06 ದಿನಾಂಕ:06.04.2015ರ ರೀತ್ಯ ನೋಂದಣಿಯಾಗಿದ್ದು, ಸಂಘದ ಕಾರ್ಯ ವ್ಯಾಪ್ತಿಯು ಜಿಲ್ಲಾ ಮಟ್ಟಕ್ಕೆ ಸೀಮಿತವಾಗಿರುತ್ತದೆ. ಸಂಘವು ಬೈಲಾ ಉದ್ದೇಶಕ್ಕೆ ಹಾಗೂ ಸಹಕಾರ ಸಂಘಗಳ ಕಾಯಿದೆ 1959 ರ ರೀತ್ಯಾ ಯಾವುದೇ ಕೆಲಸ ಕಾರ್ಯಗಳನ್ನು ನಿರ್ವಹಿಸದೇ ಸ್ಥಗಿತಗೊಂಡಿರುತ್ತದೆ. .

ಸಹಕಾರ ಸಂಘಗಳ ನಿರೀಕ್ಷಕರು, ಮಂಡ್ಯ ತಾಲ್ಲೂಕು, ಇವರು ದಿ: 25.05.2013 ರಂದು ಸಂಘಕ್ಕೆ ಭೇಟಿ ನೀಡಲಾಗಿದ್ದು, ಸಂಘದ ಕಛೇರಿಯ ಬಾಗಿಲು ಮುಚ್ಚಿದ್ದು, ಸಂಘದ ಕಾರ್ಯವೈಖರಿಯ ಬಗ್ಗೆ ಆಸಕ್ತಿ ವಹಿಸಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದಿಲ್ಲ. ಸಂಘವು ಹಲವಾರು ದಿನಗಳಿಂದ ಕಾರ್ಯ ನಿರ್ವಹಿಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಂಘವು 2012–13ನೇ ಸಾಲಿನಿಂದ ಯಾವುದೇ ವ್ಯವಹಾರ ಹಾಗೂ ಆಡಳಿತ ಮಂಡಳಿ ಸಭೆಯನ್ನು ನಡೆಸಿರುವುದಿಲ್ಲ. ಸಂಘವು ಸತತವಾಗಿ ಕ್ರೋಢೀಕೃತ ನಷ್ಟವನ್ನು ಹೊಂದಿರುತ್ತದೆ. ಕಾರ್ಯ ಚಟುವಟಿಕೆಯನ್ನು ನಡೆಸಿಕೊಂಡು ಹೋಗಲು ಸಂಘದ ಆಡಳಿತ

ಮಂಡಳಿಯು ಸಂಪೂರ್ಣವಾಗಿ ವಿಫಲಗೊಂಡಿರುತ್ತದೆ. ಸಂಘವನ್ನು ಸ್ಥಗಿತದಲ್ಲಿಯೇ ಮುಂದುವರಿಸುವುದರಿಂದ ಸಂಘದ ಸದಸ್ಯರಾಗಲಿ, ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿಲ್ಲದ ಕಾರಣ ದಿ: 21.03.2014 ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದರೂ ಸಂಘದ ಸಮಾಪನ ಬಗ್ಗೆ ಯಾವುದೇ ತಕರಾರು ಅರ್ಜಿ ಸ್ವೀಕೃತವಾಗಿಲ್ಲದ ಕಾರಣ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ಮಂಡ್ಯ, ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸುವಂತೆ ಉಲ್ಲೇಖಿತ ಪತ್ರದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ, ಇವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರ ಶಿಫಾರಸ್ಸಿನಂತೆ ಸಂಘವನ್ನು ಸ್ಥಗಿತದಲ್ಲಿಯೇ ಮುಂದುವರಿಸುವುದರಿಂದ ಸಂಘದ ಸದಸ್ಯರಿಗಾಗಲೀ, ಸಾರ್ವಜನಿಕರಿಗಾಗಲೀ ಯಾವುದೇ ಪ್ರಯೋಜನವಿಲ್ಲವೆಂದು ಮನಗೊಂಡು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಸಸಂನಿ/ಸಮಾಪನೆ/14/2014-15 ದಿನಾಂಕ:23-11-2015

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 73(1) ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಒ/139/ಸಿಎಲ್‌ಎಂ/2010, ದಿನಾಂಕ:14.07.2011 ರಲ್ಲಿ ಪ್ರತ್ಯಾಯೋಜಿಸಲ್ಪಟ್ಟ ಅಧಿಕಾರವನ್ನು ಚಲಾಯಿಸಿ, **ವೈ ರಂಗಪ್ಪ ಸಹಕಾರ ಸಂಘಗಳ ಅಪರ ನಿಬಂಧಕರು, (ವಸತಿ ಮತ್ತು ಇತರೆ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು**, ಆದ ನಾನು ಸ್ಥಗಿತಗೊಂಡ ಮಂಡ್ಯ ಜಿಲ್ಲಾ ಸಾರಿಗೆ ಮತ್ತು ಪ್ರವಾಸೋದ್ಯಮ ಸಹಕಾರ ಸಂಘ ನಿ., ಮಂಡ್ಯ ಈ ಸಂಘವನ್ನು ಸಮಾಪನೆಗೊಳಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಮಂಡ್ಯ ಇವರನ್ನು ಸಮಾಪನಾಧಿಕಾರಿಯಾಗಿ ನೇಮಿಸಿರುತ್ತೇನೆ. ಸಮಾಪಕರು ಸಂಘದ ಪ್ರಭಾರವನ್ನು ವಹಿಸಿಕೊಂಡು, ಆದ್ಯತಾ ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಆಸ್ತಿ ಮತ್ತು ಜವಾಬ್ದಾರಿಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಿ, ಸಂಘದ ನೋಂದಣಿ ರದ್ಧತಿಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿರುತ್ತೇನೆ.

ಈ ಆದೇಶವನ್ನು ನನ್ನ ಸ್ವಸಹಿ ಹಾಗೂ ಹುದ್ದೆಯ ಮೊಹರಿನೊಂದಿಗೆ ದಿ: 23-11-2015 ರಂದು ಹೊರಡಿಸಿರುತ್ತೇನೆ.

PR. 79
SC. 10

ವೈ. ರಂಗಪ್ಪ
ಸಹಕಾರ ಸಂಘಗಳ ಅಪರ ನಿಬಂಧಕರು,
(ವಸತಿ ಮತ್ತು ಇತರೆ)

ಔಷಧ ನಿಯಂತ್ರಣ ಇಲಾಖೆ

ಔಷಧ ನಿಯಂತ್ರಕರ ಕಛೇರಿ, ಅರಮನೆ ರಸ್ತೆ, ಬೆಂಗಳೂರು

ಜ್ಞಾಪನ

ಸಂಖ್ಯೆ:ಔನಿಇ/557/ಸಿಬ್ಬಂದಿ/2015-16, ದಿನಾಂಕ: 27.11.2015.

ವಿಷಯ : ಶ್ರೀಮತಿ ನಮ್ರತಾ ಹಳ್ಳೂರ, ಔಷಧ ಪರಿವೀಕ್ಷಕರು-8, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಗಳಿಕೆ ರಜೆ ಉಪಯೋಗಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ : ಶ್ರೀಮತಿ ನಮ್ರತಾ ಹಳ್ಳೂರ, ಔಷಧ ಪರಿವೀಕ್ಷಕರು-8, ಇವರ ಮನವಿ ಪತ್ರ ದಿನಾಂಕ: 11.11.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದ ಉಲ್ಲೇಖಿತ ಮನವಿಯ ಮೇರೆಗೆ, ಶ್ರೀಮತಿ ನಮ್ರತಾ ಹಳ್ಳೂರ, ಔಷಧ ಪರಿವೀಕ್ಷಕರು-8, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಹಾಲೇಖಪಾಲರ ರಜೆ ಲಭ್ಯತೆ ನಿರೀಕ್ಷೆಯ ಮೇರೆಗೆ, ದಿನಾಂಕ: 30.11.2015 ರಿಂದ 11.12.2015ರವರೆಗೆ (ಎರಡು ದಿನಗಳೂ ಸೇರಿದಂತೆ) ಒಟ್ಟು 12 ದಿನಗಳ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ರಜೆಯಲ್ಲಿ ತೆರಳಲು ಅನುಮತಿಸಿದೆ. .

ಸದರಿ ಅಧಿಕಾರಿಯವರು ರಜೆಯ ಮೇಲೆ ತೆರಳುವ ಮುನ್ನ ಅವರು ಹೊಂದಿರುವ ಕೇಂದ್ರ ಕಛೇರಿಯ ಔಷಧ ಪರಿವೀಕ್ಷಕರು-8 ಹಾಗೂ ಅಧಿಕ ಪ್ರಭಾರವಾಗಿ ಹೊಂದಿರುವ ಔಷಧ ಪರಿವೀಕ್ಷಕರು-5 ಹುದ್ದೆಗಳ ಪ್ರಭಾರವನ್ನು ಶ್ರೀ ಮನೋಹರ್ ಕೆ.ವಿ. ಔಷಧ ಪರಿವೀಕ್ಷಕರು-6, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ವಹಿಸಿಕೊಡಲು ಈ ಮೂಲಕ ಆದೇಶಿಸಿದೆ.

ಶ್ರೀ ಮನೋಹರ್ ಕೆ.ವಿ. ಔಷಧ ಪರಿವೀಕ್ಷಕರು-6, ಕೇಂದ್ರ ಕಛೇರಿ, ಬೆಂಗಳೂರು ಇವರು ಶ್ರೀಮತಿ ನಮ್ರತಾ ಹಳ್ಳೂರ ಇವರಿಂದ ಔಷಧ ಪರಿವೀಕ್ಷಕರು-5 ಮತ್ತು 8, ಕೇಂದ್ರ ಕಛೇರಿ, ಬೆಂಗಳೂರು ಹುದ್ದೆಗಳ ಪ್ರಭಾರವನ್ನು ವಹಿಸಿಕೊಂಡು, ಅವರ ರಜೆ ಅವಧಿ ಪೂರೈಸುವವರೆಗೆ ತಮ್ಮ ಹುದ್ದೆಯ ಕರ್ತವ್ಯಗಳೊಂದಿಗೆ ಹೆಚ್ಚುವರಿಯಾಗಿ ಹಾಗೂ ಸಮವರ್ತಿ ಪ್ರಭಾರದ ಮೇರೆಗೆ ನಿರ್ವಹಿಸಲು ಈ ಮೂಲಕ ನಿದೇಶಿಸಿದೆ.

PR. 80
SC. 25

ಔಷಧ ನಿಯಂತ್ರಕರು.

ಔಷಧ ನಿಯಂತ್ರಣ ಇಲಾಖೆ

ಔಷಧ ನಿಯಂತ್ರಕರ ಕಛೇರಿ, ಅರಮನೆ ರಸ್ತೆ, ಬೆಂಗಳೂರು

ಜ್ಞಾಪನ

ಸಂಖ್ಯೆ:ಔನಿಇ/537/ಸಿಬ್ಬಂದಿ/2015-16, ದಿನಾಂಕ: 27.11.2015.

ವಿಷಯ : ಶ್ರೀಮತಿ ವಿಭಾ ಎಲ್, ಔಷಧ ಪರಿವೀಕ್ಷಕರು-7, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಸಂಯೋಜಿತ ರಜೆ ಉಪಯೋಗಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ : ಶ್ರೀಮತಿ ವಿಭಾ ಎಲ್., ಔಷಧ ಪರಿವೀಕ್ಷಕರು-7, ಇವರ ಮನವಿ ಪತ್ರ ದಿನಾಂಕ: 04.11.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದ ಉಲ್ಲೇಖಿತ ಮನವಿಯ ಮೇರೆಗೆ, ಶ್ರೀಮತಿ ವಿಭಾ ಎಲ್, ಔಷಧ ಪರಿವೀಕ್ಷಕರು–7, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಹಾಲೇಖಪಾಲರ ರಜೆ ಲಭ್ಯತೆ ನಿರೀಕ್ಷೆಯ ಮೇರೆಗೆ, ದಿನಾಂಕ: 30.11.2015 ರಿಂದ 23.12.2015ರವರೆಗೆ (ಎರಡು ದಿನಗಳೂ ಸೇರಿದಂತೆ) ಒಟ್ಟು 24 ದಿನಗಳ ಸಂಯೋಜಿತ ರಜೆಯನ್ನು ಉಪಯೋಗಿಸಿಕೊಂಡು ರಜೆಯಲ್ಲಿ ತೆರಳಲು ಅನುಮತಿಸಿದೆ. .

ಸದರಿ ಅಧಿಕಾರಿಯವರು ರಜೆಯ ಮೇಲೆ ತೆರಳುವ ಮುನ್ನ ಅವರು ಹೊಂದಿರುವ ಕೇಂದ್ರ ಕಛೇರಿಯ ಔಷಧ ಪರಿವೀಕ್ಷಕರು–7 ಹುದ್ದೆಯ ಪ್ರಭಾರವನ್ನು ಶ್ರೀ ಉಮಾಕಾಂತ್ ಆರ್. ಪಾಟೀಲ್, ಸಹಾಯಕ ಔಷಧ ನಿಯಂತ್ರಕರು–3, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ವಹಿಸಿಕೊಡಲು ಈ ಮೂಲಕ ಆದೇಶಿಸಿದೆ.

ಶ್ರೀ ಉಮಾಕಾಂತ್ ಆರ್. ಪಾಟೀಲ್, ಸಹಾಯಕ ಔಷಧ ಪರಿವೀಕ್ಷಕರು–3, ಕೇಂದ್ರ ಕಛೇರಿ, ಬೆಂಗಳೂರು ಇವರು ಶ್ರೀಮತಿ ವಿಭಾ ಎಲ್. ಇವರಿಂದ ಔಷಧ ಪರಿವೀಕ್ಷಕರು–7 ಹುದ್ದೆಯ ಪ್ರಭಾರವನ್ನು ವಹಿಸಿಕೊಂಡು, ಅವರ ರಜೆ ಅವಧಿ ಪೂರೈಸುವವರೆಗೆ ತಮ್ಮ ಹುದ್ದೆಯ ಕರ್ತವ್ಯಗಳೊಂದಿಗೆ ಹೆಚ್ಚುವರಿಯಾಗಿ ನಿರ್ವಹಿಸಲು ಈ ಮೂಲಕ ನಿರ್ದೇಶಿಸಿದೆ.

PR. 81

ಔಷಧ ನಿಯಂತ್ರಕರು.

SC. 25

ಔಷಧ ನಿಯಂತ್ರಣ ಇಲಾಖೆ

ಔಷಧ ನಿಯಂತ್ರಕರ ಕಛೇರಿ, ಅರಮನೆ ರಸ್ತೆ, ಬೆಂಗಳೂರು

ಜ್ಞಾಪನ

ಸಂಖ್ಯೆ:ಔನಿಇ/468/ಸಿಬ್ಬಂದಿ/2015–16, ದಿನಾಂಕ: 03.12.2015.

ವಿಷಯ : ಶ್ರೀಮತಿ ಪಾರ್ವತಿ ಆನಂದಗೌಡರ್, ಮುಖ್ಯ ವೈಜ್ಞಾನಿಕ ಅಧಿಕಾರಿ, ಔಷದ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು ಇವರಿಗೆ ಗಳಿಗೆ ರಜೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ :
1) ಶ್ರೀಮತಿ ಪಾರ್ವತಿ ಆನಂದಗೌಡರ್, ಮುಖ್ಯ ವೈಜ್ಞಾನಿಕ ಅಧಿಕಾರಿ ಇವರ ರಜಾ ಅರ್ಜಿ ದಿನಾಂಕ: 14.10.2015.
2) ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ರಜೆ ಲಭ್ಯತೆ ಪತ್ರ ಸಂಖ್ಯೆ: GE2/P-7 Vol PN/15-16/110. ದಿನಾಂಕ: 03.11.2015.

ಶ್ರೀಮತಿ ಪಾರ್ವತಿ ಆನಂದಗೌಡ, ಮುಖ್ಯ ವೈಜ್ಞಾನಿಕ ಅಧಿಕಾರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು ಇವರಿಗೆ ದಿನಾಂಕ: 04.12.2015 ರಿಂದ 21.12.2015ರವರೆಗೆ ಒಟ್ಟು 18 ದಿನಗಳ ರಜೆಯನ್ನು ಉಲ್ಲೇಖ (2)ರ ಮಹಾಲೇಖಪಾಲರ ಪತ್ರದಲ್ಲಿನ ರಜೆ ಲಭ್ಯತೆಯ ಮೇರೆಗೆ ಮಂಜೂರು ಮಾಡಲಾಗಿದೆ.

ರಜೆಯ ಮೇಲೆ ಹೋಗದಿದ್ದಲ್ಲಿ, ಶ್ರೀಮತಿ ಪಾರ್ವತಿ ಆನಂದಗೌಡರ್ ಇವರು ಹಾಲಿ ಹುದ್ದೆಯಲ್ಲಿಯೇ ಮುಂದುವರೆಯುತ್ತಿದ್ದರೆಂದು ಪ್ರಮಾಣೀಕರಿಸಿದೆ.

ಸದರಿ ಅಧಿಕಾರಿಯವರು ರಜೆಯ ಮೇಲೆ ತೆರಳುವ ಮುನ್ನ ಅವರು ಹೊಂದಿರುವ ಮುಖ್ಯ ವೈಜ್ಞಾನಿಕ ಅಧಿಕಾರಿ ಹುದ್ದೆಯ ಪ್ರಭಾರವನ್ನು ಶ್ರೀ ಎಸ್.ಎನ್. ಶಿವಶಂಕರ್, ಮುಖ್ಯ ವೈಜ್ಞಾನಿಕ ಅಧಿಕಾರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು ಇವರಿಗೆ ವಹಿಸಿಕೊಡಲು ಈ ಮೂಲಕ ಆದೇಶಿಸಿದೆ.

ಶ್ರೀ ಎಸ್.ಎನ್. ಶಿವಕಂಕರ್, ಮುಖ್ಯ ವೈಜ್ಞಾನಿಕ ಅಧಿಕಾರಿ ಇವರು ಶ್ರೀಮತಿ ಪಾರ್ವತಿ ಆನಂದಗೌಡರ್ ಇವರಿಂದ ಬೆಂಗಳೂರು ಔಷಧ ಪರೀಕ್ಷಾ ಪ್ರಯೋಗಾಲಯದ ಮುಖ್ಯ ವೈಜ್ಞಾನಿಕ ಅಧಿಕಾರಿ ಹುದ್ದೆಯ ಪ್ರಭಾರವನ್ನು ಪಡೆದು, ಅವರ ರಜೆ ಅವಧಿ ಪೂರೈಸುವವರೆಗೆ ತಮ್ಮ ಹುದ್ದೆಯ ಕರ್ತವ್ಯಗಳೊಂದಿಗೆ ಹೆಚ್ಚುವರಿಯಾಗಿ ಹಾಗೂ ಸಮವರ್ತಿ ಪ್ರಭಾರದ ಮೇರೆಗೆ ನಿರ್ವಹಿಸಲು ಈ ಮೂಲಕ ನಿರ್ದೇಶಿಸಿದೆ.

PR. 82

ಔಷಧ ನಿಯಂತ್ರಕರು.

SC. 25

DEPARTMENT OF COMMERCIAL TAXES

Office of the Commissioner of Commercial Taxes (Karnataka), Vanijya Therige Karyalaya, Gandhi Nagar, Kalidasa Road, Bengaluru.

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU-CLARIFICATION UNDER SECTION 59(4) OF THE KARNATAKA VALUE ADDED TAX ACT 2003,

Present : **RITVIK PANDEY, I.A.S.**
Commissioner of Commercial Taxes.
(Karnataka) Bengaluru.

Sub: KVAT Act, 2003-Clarification under Section 59(4)regarding the rate of tax applicable on 'Print Lamination Emulsion' -reg.

Ref: Application received on 06-08-2015 M/s Sri Mahalakshmi Graphics, Jyothi Complex, Opp. Kanchana Hundai, Urwa Stores, Mangalore-575 006. (TIN: 29290478014).

In the application cited above, M/s. Sri Mahalakshmi Graphics, Jyothi Complex, Opp. Kanchana Hundai, Urwa Stores, Mangalore-575006 (TIN: 29290478014) has sought clarification regarding the rate of tax applicable on 'Print Lamination Emulsion'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. It is noticed that, "Print lamination emulsion" is classified as 'Copolymers' under entry no.3905 91 00 of Central Excise Act, as per tax invoice furnished. As the same falls under entry 3905 which is covered under Sl. no.133 of Notification No FD 197 CSL 2005 (VI) dated: 30/04/2005, it is taxable at 5.5% under the provisions of KVAT Act, 2003.

4. Hence the following clarification is issued.

CLARIFICATION NO.CLR.CR.69/15-16. DATED: 10-12-2015.

It is clarified that, 'Print Lamination emulsion' is covered under HSN Code 3905 91 00 and is classified as 'Copolymers'. As HSN Code 3905 is covered under SI. No. 133 of Notificaiton No. FD 197 CSL 2005 (VI) dated: 30-04-2005, 'Print Lamination Emulsion' is taxable at 5.5% with effect from 01.08.2012 and onwards under the provisions of the KVAT Act, 2003.

PR. 83
SC. 25

RITVIK PANDEY
Commissioner of Commercial Taxes
Karnataka, Bengaluru.

DEPARTMENT OF COMMERCIAL TAXES

Office of the Commissioner of Commercial Taxes (Karnataka), Vanijya Therige Karyalaya, Gandhi Nagar, Kalidasa Road, Bengaluru.

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU-CLARIFICATION UNDER SECTION 59(4) OF THE KARNATAKA VALUE ADDED TAX ACT 2003,

Present : **RITVIK PANDEY, I.A.S.**
Commissioner of Commercial Taxes.
(Karnataka) Bengaluru.

Sub: KVAT Act, 2003-Clarification under Section 59(4)regarding the rate of tax applicable on 'certain packing materials' -reg.

Ref: Application dated: 29-12-2014 M/s Rajhans Enterprises, No.134 Industrial Town, 4th Main, Rajajinagar, Bengaluru-560 044 (TIN 29120571664)

In the application cited above, M/s Rajhans Enterprises, No. 134, Industrial Town, 4th Main, Rajajinagar, Bengaluru-560 044 (TIN 29120571664) has sought clarification regarding the rate of tax applicable on 'Zip lock Pouches, Shampoo Sachets, Biscuit Wrappers, Dispensing pouches with dispenser, Gutka Packets and stand up pouches'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Perusal of photo copies of these products reveal that, these goods are sacks and bags made up of polymers of ethylene and poly (vinyl chloride) and hence covered by Sl.No.145 of the Notification No.FD 197 CSL 2005 (6) dated 30-04-2005, liable to tax @ 5.5% with effect from 01-08-2012 and onwards.

4. Hence the following clarification is issued.

CLARIFICATION NO.CLR.CR.135/2014-15. DATED: 10-12-2015.

It is clarified that, the sacks and bags of Polymers of ethylene and Poly (vinyl chloride) are covered by Sl.No.145 of the Notification No. FD 197 CSL 2005 (6) dated: 30/04/2005 and therefore liable to tax @ 5.5 % W.E.F. 01-08-2012 and onwards.

PR. 84
SC. 25

RITVIK PANDEY
Commissioner of Commercial Taxes
Karnataka, Bengaluru.

DEPARTMENT OF COMMERCIAL TAXES

Office of the Commissioner of Commercial Taxes (Karnataka), Vanijya Therige Karyalaya, Gandhi Nagar, Kalidasa Road, Bengaluru.

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU-CLARIFICATION UNDER SECTION 59(4) OF THE KARNATAKA VALUE ADDED TAX ACT 2003,

Present : **RITVIK PANDEY, I.A.S.**
Commissioner of Commercial Taxes.
(Karnataka) Bengaluru.

Sub: KVAT Act, 2003 - Clarification of rate of tax Applicable on 'Servicing of Poultry Machines" -reg.

Ref: Application dated 26-06-2014 of M/s Azra's Poultry Equipment, No.1, Miller Tank Bund Road, Bengaluru-560 052 (TIN:29440699431)

In the the application cited above of M/s Azra's Poultry Equipment, No.1, Miller Tank Bund Road, Bengaluru-560052 (TIN :29440699431) has sought clarification whether VAT is payable on service portion of contract for servicing of Poultry machines.

2. Section 59(4) of the Karnataka Value Added Tax Act, 2003 (herein afterwards called 'Act') empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. The applicant was provided with an opportunity of hearing by way of issue of notices dated 21/02/2015 and 29/09/2015 but has failed to appear for hearing.

4. The matter is examined and clarification is issued as under**.**

CLARIFICATION NO.CR.69/14-15. DATED: 10-12-2015.

It is clarified that,

a) VAT is payable at 14.5% on taxable turnover of transfer of property in goods after deducting allowable deductions as per Rule 3(2) of KVAT Rules, 2005.

b) VAT is not payable on labour and other like charges not involving transfer of property in goods.

PR. 85
SC. 25

RITVIK PANDEY
Commissioner of Commercial Taxes
Karnataka, Bengaluru.

DEPARTMENT OF COMMERCIAL TAXES

Office of the Commissioner of Commercial Taxes (Karnataka), Vanijya Therige Karyalaya, Gandhi Nagar, Kalidasa Road, Bengaluru.

PROCEEDINGS OF THE COMMISSIONER OF COMMERCIAL TAXES, (KARNATAKA), BENGALURU-CLARIFICATION UNDER SECTION 59(4) OF THE KARNATAKA VALUE ADDED TAX ACT 2003,

Present : **RITVIK PANDEY, I.A.S.**
Commissioner of Commercial Taxes.
(Karnataka) Bengaluru.

Sub: KVAT Act, 2003 - Clarification under Section 59(4) regarding the rate of tax applicable on 'Certain Chemicals' -reg.

Ref: Application dated:26-08-2015 M/s Tulsiram Hanumanbagas Gilada, No.428, 12th Cross, 4th Phase, Peenya Industrial Area, Bengaluru-560 058 (TIN: 29600699634).

In the application cited above of M/s. Tulsiram Hanumanbagas Gilada, No.428, 12th Cross, 4th Phase, Peenya Industrial Area, Bengaluru-560 058 has sought clarification regarding the rate of tax applicable on 'Certain Chemicals'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. It is noticed that the commodities along with Excise Tariff Code, for which clarification is sought are not classified as industrial inputs and not covered under Notification No. FD 197 CSL 2005 (6) dated: 30/04/2005 and hence these goods for which clarification is

sought are taxable at 14.5% under section 4(1)(b)(iii) of KVAT Act, 2003.

4. Hence the following clarification is issued.

CLARIFICATION NO.CLR.CR.84/15-16. DATED: 10-12-2015.

It is clarified that,

Sl.No.	Traffic/HSN Code	Product name given by the applicant
1.	40025900	Acrylonitrile Butadiene Rubber KNB-35L
2.	28112200	Precipated Silica Ultrasil VN3
3.	34039100	Silicon Emulsion
4.	25030010	Sulphur Powder
5.	40023900	Synthetic Rubber Skyprene B-30
6.	40021990	Styrene Butadiene Rubber 1502

The above Products are taxable at 14.5% under Section 4(1)(b)(iii) of the KVAT Act, 2003.

RITVIK PANDEY

Commissioner of Commercial Taxes

Karnataka, Bengaluru.

PR. 86

SC. 25

ಕರ್ನಾಟಕ ಲೋಕಸೇವಾ ಆಯೋಗ

ಉದ್ಯೋಗ ಸೌಧ ಬೆಂಗಳೂರು–560001

ವಿಷಯ : 2015ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಲ್ಲಿ ಅಭ್ಯರ್ಥಿ ಶ್ರೀಮತಿ ಸಾವಿತ್ರಿ ಜೆ. ಬಿರಾದಾರ್, ಮಹಿಳಾ ಪೊಲೀಸ್ ಪೇದೆ, ಇವರು ಅಕೌಂಟ್ಸ್ ಹೈಯರ್ ಪತ್ರಿಕೆ–2ರ ಪರೀಕ್ಷಾ ಅವಧಿಯಲ್ಲಿ ಮೊಬೈಲ್ ಉಪಯೋಗಿಸಿರುವ ಪರೀಕ್ಷಾ ದುರಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಡನೆ ವಿಧಿಸುವ ಕುರಿತು.

ಓದಲಾಗಿದೆ :

1. ಶ್ರೀಮತಿ ಸಾವಿತ್ರಿ ಜೆ. ಬಿರಾದಾರ್(ನೋಂ.ಸಂ.251231), ಇವರಿಗೆ ಜಾರಿ ಮಾಡಿದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಇ.ಪ.(3)341/2015–16/ಪಿಎಸ್‌ಸಿ, ದಿ:07–11–2015.
2. ಸದರಿ ಅಭ್ಯರ್ಥಿಯ ಲಿಖಿತ ಸಮಜಾಯಿಷಿ ದಿ:16–11–2015.
3. ಆಯೋಗದ ಸಭಾ ನಡವಳಿ ದಿ:22–12–2015.

ಪ್ರಸ್ತಾವನೆ:

